

# ಶ್ರೀ ಪ್ರಸನ್ನವೆಂಕಟದಾಸರು

# ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳ ಒಳನೋಟ ಮತ್ತು ಚಿಂತನೆ

| ಪ್ರಬಂಧನಕಾರರು | ವಿಷಯ |
|---|---|
| 1. ಡಾ. ಆರ್. ಜಿ. ಗುಡಿ<br>ನಂ. 10, ಶ್ರೀನಿಧಿ ಪ್ರಕಾಶನ,<br>ವಿದ್ಯಾನಗರ, ಅತಣಿ,<br>ಬೆಳಗಾಂ–591304. | ಶ್ರೀ ಪ್ರಸನ್ನವೆಂಕಟದಾಸರ<br>ಕೃತಿಗಳಲ್ಲಿ ದ್ವೈತ ಸಿದ್ಧಾಂತ |
| 2. ಡಾ. ಕೃಷ್ಣಕೊಲ್ಲಾಹಾರ ಕುಲಕರ್ಣಿ<br>ನಂ.633, 'ಮಹಿಪತಿ',<br>ಕೀರ್ತಿ ನಗರ, ಬಿಜಾಪುರ–586101. | ಶ್ರೀ ಪ್ರಸನ್ನವೆಂಕಟದಾಸರ<br>ಆತ್ಮನಿವೇದನೆಯ ಕೆಲವು<br>ಕೃತಿಗಳು |

# ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳಲ್ಲಿ ದ್ವೈತ ಸಿದ್ಧಾಂತ

ಡಾ|| ಆರ್. ಜಿ. ಗುಡಿ

ಶತ ಶತಮಾನಗಳಿಂದ ಹರಿದುಬರುತ್ತಿರುವ ಹರಿದಾಸಸಾಹಿತ್ಯ ನಾಡಿನ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದಂತೆ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಶ್ರೇಯಸ್ಸನ್ನು ತನ್ನದಾಗಿಸಿಕೊಂಡಿದೆ. ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಹಾಗೂ ಸಂಗೀತ ಮುಂತಾದ ಕ್ಷೇತ್ರಗಳಿಗೆ ಒಟ್ಟು ಕರ್ನಾಟಕ ಸಂಸ್ಕೃತಿಗೆ ದಾಸಸಾಹಿತ್ಯದ ಕೊಡುಗೆ ಅಮೂಲ್ಯವಾಗಿದೆ.

ಕನ್ನಡನಾಡಿನ ಹಳ್ಳಿ ಹಳ್ಳಿಗಳಲ್ಲಿ ವಿವಿಧ ಜನಸಮೂಹದಲ್ಲಿ ಇಂದು ನಮಗೆ ಕೇಳಿಬರುವುದು ಪಂಪ, ರನ್ನರಂಥವರ ಮಹಾಕಾವ್ಯಗಳಲ್ಲ, ಬದಲಾಗಿ ದಾಸರ ದೇವರ ನಾಮಗಳು, ಹಬ್ಬ-ಹರಿದಿನಗಳಂತಹ ಶುಭ ಪ್ರಸಂಗಗಳಂತೆ, ಕೆಲವೆಡೆ ನಿಯಮಿತವಾಗಿಯೂ ಈ ಕೀರ್ತನೆಗಳು ಕೇಳಿಬರುತ್ತವೆ. ಮಾತ್ರವಲ್ಲ ದೊಡ್ಡ ದೊಡ್ಡ ಸಂಗೀತಕಾರ್ಯಕ್ರಮಗಳೂ ಸಹ ದೇವರ ನಾಮಗಳಿಲ್ಲದೆ ಮುಕ್ತಾಯಗೊಳ್ಳದಿರುವುದು ಕೀರ್ತನೆಗಳ ಜನಪ್ರಿಯತೆಗೆ ಹಿಡಿದ ಕೈಗನ್ನಡಿ, ಹೀಗೆ 'ಕೀರ್ತನಸಾಹಿತ್ಯ' ಕನ್ನಡ ಜನಜೀವನದಲ್ಲಿ ಹಾಸುಹೊಕ್ಕಾಗಿ ಜನರ ನಾಲಗೆಯ ಮೇಲೆ ನಲಿದಾಡಿದ ಸಾಹಿತ್ಯವಾಗಿದೆ.

ಭಕ್ತಿಪಂಥದ ಇತಿಹಾಸದಲ್ಲಿ ಭದ್ರವಾದ ಸ್ಥಾನ ನಿರ್ಮಿಸಿಕೊಂಡು ಸುದೀರ್ಘವಾಗಿ ಹರಿದು ಬರುತ್ತಿರುವ ಹರಿದಾಸ ಪರಂಪರೆಯ ಚೇತನ "ದ್ವೈತದರ್ಶನ" ಹರಿದಾಸರ ಗುರು ಆನಂದತೀರ್ಥರು. ಅವರು ಬೋಧಿಸಿದ ಹರಿಸರ್ವೋತ್ತಮತ್ವ ಹರಿದಾಸರ ತತ್ವ. ಅವರ ಉಪದೇಶವೇ ಹರಿದಾಸರ

ಸಂದೇಶ ದ್ವೈತಸಿದ್ಧಾಂತದ ಬೆಳಕಿನಲ್ಲಿ ಮುನ್ನಡೆದು ಆತ್ಮಸಾಕ್ಷಾತ್ಕಾರ ಮಾಡಿಕೊಂಡವರು ಹರಿದಾಸರು. ಭವ್ಯವಾಗಿ ಕಂಗೊಳಿಸುವ ಈ ದಾಸಸಾಹಿತ್ಯ ಸೌಧದ ಭದ್ರಬುನಾದಿ ದ್ವೈತ ಸಿದ್ಧಾಂತ.

ದ್ವೈತ ದರ್ಶನದ ಎಲ್ಲ ಪ್ರಮೇಯಗಳು ಸಂಸ್ಕೃತದಲ್ಲಿಯೇ ಅಡಗಿ–ಕೊಂಡುದರಿಂದ ಶ್ರೀ ಸಾಮಾನ್ಯನು ಕಡೆಗಣಿತನಾಗಿಯೇ ಉಳಿದನು. ದ್ವೈತದರ್ಶನದಲ್ಲಿ ಬಂಧಿತವಾಗಿದ್ದ ವೇದೋಪನಿಷತ್ತುಗಳ ಹರಿಭಕ್ತಿಗಂಗೆಯನ್ನು ಕನ್ನಡದಂಗಳದಲ್ಲಿ ಹರಿಸಿದವರು ದಾಸಕೂಟದ ಭಗೀರಥರು. ಇವರು ತಮ್ಮ ಕೀರ್ತನೆಗಳ ಮೂಲಕ ಮನೆಮನೆಗೂ ಭಕ್ತಿಯ ಕಂಪನ್ನು ಬೀರಿದರು.

ವೇದೋಪನಿಷತ್ತುಗಳಲ್ಲಿಯ ತತ್ವಸಿದ್ಧಾಂತಗಳು ದ್ವೈತದರ್ಶನಾಚಾರ್ಯರಿಂದ ನಾರಿಕೇಲ ಪಾಕಗೊಂಡಿದ್ದರೆ. ಅವೇ ಹರಿದಾಸರಿಂದ ದ್ರಾಕ್ಷಾಪಾಕಗೊಂಡವು. ದ್ವೈತದರ್ಶನದ ಕೃತಿಗಳು ನೇರವಾದ ಸೂರ್ಯನ ಪ್ರಕಾಶದಂತೆ ಪ್ರಖರವಾದರೂ ಅದೇ ಸೂರ್ಯನ ಪ್ರಕಾಶ ಚಂದ್ರನಮೂಲಕ ಹರಿದಾಗ ತಂಪಾಗುವಂತೆ, ಹರಿದಾಸರ ಮೂಲಕ ಹರಿದ ದ್ವೈತದರ್ಶನದ ವಿಚಾರಗಳೂ ಸಹ ಆಹ್ಲಾದಕರವಾಗಿದೆ.

ಹರಿದಾಸ ಸಾಹಿತ್ಯವು ವೈವಿಧ್ಯಮಯವಾಗಿದೆ. ಕೀರ್ತನೆ, ಸುಳಾದಿ ಹಾಗೂ ಉಗಾಭೋಗಗಳಂತಹ ದಾಸಸಾಹಿತ್ಯದ ವಿಶಿಷ್ಟ ಪ್ರಕಾರಗಳಂತೆ ಏಳೆ, ತ್ರಿಪದಿ, ಸಾಂಗತ್ಯ, ಷಟ್ಪದಿಗಳಂತಹ ವಿವಿಧ ಛಂದೋಬಂಧದ ವೈಕುಂಠವರ್ಣನೆ, ಲಕ್ಷ್ಮೀಶೋಭಾನೆ, ಹರಿಭಕ್ತಿಸಾರ, ಮಧ್ವನಾಮ, ಹರಿಸರ್ವೋತ್ತಮಸಾರ, ಗುಂಡಕ್ರಿಯೆ, ಸ್ವಪ್ನ ಪದಗಳಂತಹ ದೀರ್ಘ ಹಾಗೂ ಲಘುಕಾವ್ಯಗಳು ಇಲ್ಲಿ ಮೈದಳೆದಿವೆ. ಜೊತೆಗೆ ಬುಡುಬುಡಿಕೆ ಪದ ಡೊಳ್ಳಿನಪದ, ಡಂಗೂರಪದ, ಕೋಲುಪದ, ಸುಗ್ಗಿಪದ, ಕಣಿಪದ, ಕೊರವಂಜಿಪದ, ಜೋಗುಳ, ಲಾವಣಿಗಳಂತಹ ಜಾನಪದ ಮಟ್ಟುಗಳೂ ಸಹ ಇಲ್ಲಿ ಸುಳಿದಾಡಿವೆ. ಇವುಗಳಿಗೆಲ್ಲ ಕಿರೀಟವಿಟ್ಟಂತೆ ಹರಿಕಥಾಮೃತಸಾರ, ತತ್ವ ಸುವ್ವಾಲಿಗಳಂತಹ ಪ್ರಮೇಯ ಗ್ರಂಥಗಳೂ ಮೈದಳೆದಿವೆ. ಹರಿದಾಸರಿಗೆ

ಇತರರಂತೆ ವಿಷಯಸ್ವಾತಂತ್ರ್ಯ ವಾಗಲೀ, ವಿಚಾರ ಸ್ವಾತಂತ್ರ್ಯವಾಗಲೀ ಇರಲಿಲ್ಲ, ಇತಂಹ ಮಿತಿಯೊಳಗಿದ್ದೂ, ಹರಿದಾಸರು ಸಂಗೀತ ಹಾಗೂ ನೃತ್ಯಗಳನ್ನು ಅಳವಡಿಸುವುದರೊಂದಿಗೆ ಈ ಮೇಲಿನ ಎಲ್ಲ ಪ್ರಕಾರಗಳಲ್ಲಿಯೂ ದ್ವೈತಸಿದ್ಧಾಂತವನ್ನು ಹರಿಸಿ, ತಂತ್ರವೈವಿಧ್ಯದಿಂದ ದ್ವೈತದರ್ಶನವನ್ನು ಆಕರ್ಷಕವಾಗಿಸಿ ಜನಪ್ರಿಯಗೊಳಿಸಿದುದೇ ಕನ್ನಡ ಹರಿದಾಸರ ಹಿರಿಮೆ ಹಾಗೂ ಸಾಧನೆ.

ಹರಿದಾಸ ಸಾಹಿತ್ಯದ ದ್ವಿತೀಯ ಘಟ್ಟವೆನಿಸಿದ ಶ್ರೀವಿಜಯದಾಸರ ಯುಗದಲ್ಲಿ ದಾಸಸಾಹಿತ್ಯಕ್ಕೆ ಸಂದ ಸೇವೆ ವಿವಿಧಮೂಲದ್ದು ವಿವಿಧ ಪ್ರಾಂತಗಳದು. ಈ ಅವಧಿಯ ಹರಿದಾಸ ಸಾಹಿತ್ಯದ ಪುನರುಜ್ಜೀವನಕ್ಕೆ ಚಾಲನೆ ದೊರೆತುದು ಶ್ರೀರಾಘವೇಂದ್ರತೀರ್ಥರಿಂದ ವಿಜಯದಾಸರ ಕಾರ್ಯಕ್ಷೇತ್ರವಾಗಿದ್ದ ಚೀಕಲಪರವಿ ಹಾಗೂ ಆಸುಪಾಸಿನಲ್ಲಿ ಅವರ ಹಾಗೂ ಅವರ ಶಿಷ್ಯಪರಂಪರೆಯ ಮೂಲಕ ನಡೆದುದು ಒಂದು ವಿಧ. ವಿಜಯದಾಸರಿಗಿಂತ ಸ್ವಲ್ಪ ಮುಂಚೆ ವಿಜಾಪುರ ಪ್ರಾಂತದಲ್ಲಿ, ಮಹಿಪತಿರಾಯರು ಹಾಗೂ ಅವರ ಮಗ ಕೃಷ್ಣರಾಯರು ಇವರಿಂದ ನಡೆದುದು ಮತ್ತೊಂದು ವಿಧ. ವಿಜಯದಾಸರ ಸಮಕಾಲೀನರಾಗಿದ್ದ ಪ್ರಸನ್ನವೆಂಕಟರಿಂದ ಬಾಗಲಕೋಟೆ ಭಾಗದಲ್ಲಿ ನಡೆದುದು ಇನ್ನೊಂದು ವಿಧ.

ಶ್ರೀ ಶ್ರೀಪಾದರಾಜರ ಯುಗದಲ್ಲಿ ಮಹಾಪೂರವಾಗಿ ಹರಿಯುತ್ತಿದ್ದ ದಾಸಸಾಹಿತ್ಯ ಗಂಗೆಯ ರಭಸ ನಂತರದಲ್ಲಿ ಕಡಿಮೆಯಾದರೂ, ಸಂಪೂರ್ಣ ಬತ್ತಿಹೋಗಲಿಲ್ಲವೆಂಬುದಕ್ಕೆ ಈ ಮಹನೀಯರ ಕೃತಿಗಳೇ ಸಾಕ್ಷಿ. ಆದ್ದರಿಂದಲೇ ಕನಕದಾಸರಿಂದ ವಿಜಯದಾಸರವರೆಗಿನ ಅವಧಿ ಹರಿದಾಸ ಸಾಹಿತ್ಯದ ಅಂಧಕಾರಯುಗವೆಂಬ ಮಾತು[1] ಸರಿಯಲ್ಲ. ವಿಜಯನಗರ ಪತನಾನಂತರ ಸಾಮಾಜಿಕ ಅಶಾಂತಿ ಮುಂತಾದ ಕಾರಣಗಳಿಂದ ಹರಿದಾಸ ಸಾಹಿತ್ಯದ ನಿರ್ಮಾಣ ಕನಕದಾಸರ

1. ಹರಿದಾಸ ಸಾಹಿತ್ಯ – ಆರ್. ಎಸ್. ಪಂಚಮುಖಿ ಪು. 67–68.

ನಂತರದ ಅವಧಿಯಲ್ಲಿ ಅಷ್ಟಾಗಿ ಆಗಲಿಲ್ಲ. ಸ್ವಲ್ಪ ಮಟ್ಟಿಗೆ ಆಗಿದ್ದರೂ ಮುಸಲ್ಮಾನರ ದಾಳಿ ಮುಂತಾದವುಗಳಿಂದ ಉಳಿದಿರಲಿಕ್ಕಿಲ್ಲ. ಉಳಿದಿದ್ದರೂ ಅಜ್ಞಾನತವಾಸದಲ್ಲಿದ್ದಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಶ್ರೀ ಶ್ರೀಪಾದರಾಜರಯುಗ ಹಾಗೂ ಶ್ರೀ ವಿಜಯದಾಸರ ಯುಗಗಳ ಸಂಧಿಕಾಲದಲ್ಲಿದ್ದು, ಈ ಉಭಯ ಯುಗಗಳ ಹರಿದಾಸ ಸಾಹಿತ್ಯ ಸಂಪ್ರದಾಯದ ಸಂಪರ್ಕ ಸೇತುವೆ ಎನಿಸಿದ ಮಹಿಪತಿದಾಸರ ಹಾಗೂ ಕೃಷ್ಣರಾಯರ ಕೃತಿಗಳು ಹರಿದಾಸ ಸಾಹಿತ್ಯದ ಚಾರಿತ್ರಿಕ ದೃಷ್ಟಿಯಿಂದ ಮಹತ್ವಪೂರ್ಣವಾಗಿವೆ. ರಾಘವೇಂದ್ರತೀರ್ಥರು ಕ್ರಿ. ಶ. 1596–1671) ಹಾಗೂ ಮಹಿಪತಿರಾಯರು (ಕ್ರಿ. ಶ. 1611–1681) ಸಮಕಾಲೀನರಾಗಿದ್ದರೂ ಒಬ್ಬರ ದೃಷ್ಟಿ ಮತ್ತೊಬ್ಬರೆಡೆಗೆ ಹರಿಯದಿರುವುದು ಸೋಜಿಗವೆನಿಸುತ್ತದೆ. ಈ ಬಗ್ಗೆ ಸಂಶೋಧನೆ ಅಗತ್ಯ.

ಇದರಂತೆ ವಿಜಯದಾಸರ ಸಮಕಾಲೀನರಾಗಿದ್ದ ಪ್ರಸನ್ನವೆಂಕಟರಿಂದ ಸಂದ ದಾಸಸಾಹಿತ್ಯ ಸೇವೆಯೂ ಗಮನಾರ್ಹವಾದಂತೆ ಸ್ಮರಣಾರ್ಹವೂ ಹೌದು. ಪ್ರಸನ್ವೆಂಕಟ, ಪ್ರಸನ್ವೆಂಕಟಕೃಷ್ಣ ಎಂಬ ಅಂಕಿತದಿಂದ ರಚನೆಗೊಂಡ ಇವರ 426 ಕೀರ್ತನೆಗಳು, 10 ಸುಳಾದಿಗಳು, 7 ಉಗಾಭೋಗಗಳು ಹಾಗೂ 6 ದೀರ್ಘವೆನ್ನ ಬಹುದಾದ ಕೃತಿಗಳು ದೊರೆತಿವೆ. ಪ್ರಸನ್ನವೆಂಕಟರ ಅಪಾರವಾದ ಸಾಹಿತ್ಯಭಂಡಾರ ಇತ್ತೀಚಿನವರೆಗೂ ಲಭ್ಯವಿದ್ದರೂ, ಅವರ ವಂಶೀಕರ ಮನೆಯೊಂದು ಮಳೆಯಿಂದ ಕುಸಿದಾಗ ಎಷ್ಟೋ ಕೃತಿಗಳು ಭೂಗರ್ಭ ಸೇರಿರುವುದು[2] ದಾಸಸಾಹಿತ್ಯಕ್ಕೊಂದು ತುಂಬಲಾರದ ನಷ್ಟ.

**ಗೀತ–ಠಾಯಿ–ಸುಳಾದ್ಯುಗಾಭೋಗ ಪದ್ಯಪದ**
**ವ್ರತ ಪ್ರಬಂಧ ರಚಿಸಿ ವಿಠಲನ**
**ಪ್ರೀತಿ ಪಡಿಸಿ ಪ್ರತ್ಯಕ್ಷಕಂಡು ನಲಿವ ವೈಷ್ಣವಾಗ್ರ**
**ನಾಥ ಪ್ರಸನ್ನವೆಂಕಟ ಕೃಷ್ಣಪ್ರಿಯನ**

---

2. ಕರ್ನಾಟಕ ಭಕ್ತವಿಜಯ – ಬೇಲೂರು ಕೇಶವದಾಸರು ಪು. 520

ಎಂಬ ಪ್ರಸನ್ನವೆಂಕಟರ ಕೃತಿ ಪ್ರಸಿದ್ಧ[3]. ಇದನ್ನು ಸರಿಯಾಗಿ ಅರ್ಥೈಸುವ ಕಾರ್ಯ ಇನ್ನೂ ಆದಂತಿಲ್ಲ. ಪ್ರಸನ್ನ ವೆಂಕಟದಾಸರು ಪುರಂದರದಾಸರ ರಚನಾ ವೈವಿಧ್ಯಗಳನ್ನು ಪ್ರಾಸ್ತಾಪಿಸುವಲ್ಲಿ ಪದ-ಪದ್ಯವ್ರಾತ ಎಂದು ಹೇಳಿರುವ ಪಾಠ ಸರಿಯಾಗಿದ್ದಲ್ಲಿ ಪದ್ಯವ್ರಾತ ಎನ್ನುವುದು 'ವೃತ್ತನಾಮ'ವನ್ನು ನಿರ್ದೇಶಿಸಬಹುದು ಎನ್ನುತ್ತಾರೆ. ವರದರಾಜರಾಯರು[4]. ಇವರ ಅಭಿಪ್ರಾಯದಲ್ಲಿ ಅರ್ಥೈಸಲಾಗಿದೆ, ಅದರಂತೆ ಪದಕ್ಕಿಂತ ಮುಂಚೆ ಪದ್ಯ ಎಂಬ ಪಾಠವನ್ನು ಇಟ್ಟುಕೊಂಡು ಗೀತತಾಯಿ, ಸುಳಾದಿ, ಉಗಾಭೋಗ, ಪದ್ಯ ಪದ ಎಂಬುದಾಗಿ ಆರು ಬಗೆಯ ಸಾಹಿತ್ಯ ಪ್ರಕಾರ ಎನ್ನಲಾಗಿದೆ.[5] 'ಪದ' ಪಾಠ ಮೊದಲೋ 'ಪದ್ಯ' ಪಾಠಮೊದಲೋ? ಪದವ್ರತವೇ ಪದ್ಯವ್ರಾತವೇ? ಮುಂತಾದ ಗೊಂದಲವು ಮುಂದುವರೆಯುತ್ತದೆ. ಹರಿದಾಸಸಾಹಿತ್ಯ ರಚನೆಯ ಪ್ರಕಾರಗಳ ಗುರುತಿಸುವಿಕೆಯೇ ತೊಡಕಿನದ್ದಾಗಿರುವಾಗ ಕಳೆದು ಹೋದಂತಿರುವ ದಾಸರ ಇನ್ನಿತರ ಕೃತಿಗಳನ್ನು ಹುಡುಕಿತರುವುದು ದೊಡ್ಡ ಸವಾಲೇ ಸರಿ.

ಈಗ ದೊರೆತಿರುವ ಪ್ರಸನ್ನವೆಂಕಟರ ದೀರ್ಘಕೃತಿಗಳು6- 1. ಸತ್ಯಭಾಮಾ ವಿಲಾಸ, 2. ನಾರಾಯಣ ಪಂಜರ, 3. ಸಮಸ್ತ ನಾಮ ಮಣಿಗಣ ಷಟ್‌ಚರಣ ಪದ್ಯಮಾಲಾ, 4. ಭೇದಮುಕ್ತಾವಲಿ, 5. ನಾರದ ಕೊರವಂಜಿ, 6. ಭಾಗವತ (ದಶಮ ಸ್ಕಂಧ ಪೂರ್ವಾರ್ಧ)

ಶ್ರೀ ಬ್ರಹ್ಮೇಶ ಸುರೇಂದ್ರ ಎಂದು ಪ್ರಾರಂಭಗೊಳ್ಳುವ 24 ಶ್ಲೋಕ, 27 ಪದಗಳು ಸೇರಿದಂತೆ ಒಟ್ಟು 51 ನುಡಿಗಳಿರುವ 'ಸತ್ಯಭಾಮಾವಿಲಾಸ'ವು 'ಹರಿವಂಶ'ದಲ್ಲಿ ಪ್ರಸ್ತುತವಾದ ಶ್ರೀಕೃಷ್ಣನು ಸ್ವರ್ಗದಿಂದ ಪಾರಿಜಾತ ವೃಕ್ಷವನ್ನು ತಂದು ಸತ್ಯಭಾಮೆಗೆ ನೀಡುವಂಥ ಕಥೆಯನ್ನು ಒಳಗೊಂಡಿದೆ. ಈ ಸತ್ಯಭಾಮಾವಿಲಾಸದ 'ಪದ್ಯಪದಲೇಸಾಗಿ' ಹಾಗೂ ಈ ಪದ್ಯಂಗಳ

**3. ಸಮಗ್ರ ದಾಸಸಾಹಿತ್ಯಸಂಪುಟ - 8, ಪು.207 (ಕ.ಸರ್ಕಾರ)**

**4. ಹರಿದಾಸ ಸಾಹಿತ್ಯಸಾರ ಪಿ. 424.**

**5. ಸಮಗ್ರ ದಾಸಸಾಹಿತ್ಯ. ಸಂಪುಟ -3, ಪು.29.**

ಪೇಳಿಸಿದನು ದಯಾಬ್ಧಿ ಪಾರಿಜಾಲೌಖ್ಯವ ಎಂಬ ಮಾತಿನಂತೆ ಸತ್ಯಭಾಮಾವಿಲಾಸ ಹಾಗೂ ಶ್ರೀಕೃಷ್ಣ ಪಾರಿಜಾತ ಎಂಬೆರಡು ಹೆಸರುಗಳೂ ಈ ಕೃತಿಗಿರುವುದು ವೇದ್ಯವಾಗುತ್ತದೆ. ಇಲ್ಲಿಯ "ಪದ್ಯಪದ ಪದ್ಯಂಗಳ" ಎಂಬ ಪದಗಳು ಗಮನಾರ್ಹ.

'ನಾರಾಯಣಾಯ ನಮೋ' ಎಂದು ಮೊದಲಾಗುವ 41 ನುಡಿಗಳ 'ನಾರಾಯಣ ಪಂಜರ'ದಲ್ಲಿ ಭಾಗವತೋಕ್ತವಾದ ಭಗವಂತನ ಮತ್ಸ್ಯ, ನರಸಿಂಹ, ರಾಮಾದಿ ಅವತಾರಗಳಂತೆ ವಿಶೇಷವಾಗಿ ಕೃಷ್ಣನ ಮಹಿಮೆಯನ್ನು ಕೊಂಡಾಡಲಾಗಿದೆ. ಕೊನೆಯಲ್ಲಿ ಭಗವಂತನಿಗೆ ಶರಣುಹೋಗಿ ಕಾಪಾಡುವಂತೆ ಮೊರೆಯಿಡಲಾಗಿದೆ.

'ಶ್ರೀರಮಾವರ ಶ್ರುತಿವಿನುತ' ಎಂದು ಪ್ರಾರಂಭವಾಗುವ 71 ಭಾಮಿನಿ ಷಟ್ಪದಿ ನುಡಿಗಳ ಕೃತಿ. 'ಸಮಸ್ತ ನಾಮ ಮಣಿಗಣ ಷಟ್ ಚರಣ ಪದ್ಯಮಾಲಾ' ಸಪ್ತ ಪದದಿಂದ ಪ್ರಾರಂಭಗೊಳ್ಳುವ  ಆದಿಯಲ್ಲಿ ಸಪ್ತ ಪದವಿರುವ ಶಬ್ದಗಳಿಂದ ಮುಂದುವರೆಯುವ 53ನೇ ನುಡಿಯೊಂದು ಲಭ್ಯವಿಲ್ಲ. ಕೃತಿಯ ಛಂದಸ್ಸನ್ನು ಶೀರ್ಷಿಕೆಯಲ್ಲಿ ಉಲ್ಲೇಖಿಸುವುದು ವಿರಳ. ಆದರೆ ಇಲ್ಲಿ 'ಷಟ್‌ಚರಣಪದ್ಯಮಾಲಾ' (ಷಟ್ಪದಿಯ ಪದ್ಯಗಳು) ಎಂಬುದನ್ನು ಶೀರ್ಷಿಕೆಯಲ್ಲಿಯೇ ಸೇರಿಸಿರುವುದು ಗಮನಾರ್ಹ.

'ಕೋಲು ಮುಕ್ತಿ ಮಾರ್ಗವಕೋಲು' ಎಂದು ಮೊದಲಾಗುವ 105 ನುಡಿಗಳ ಜಾನಪದ ಮಟ್ಟಿನ ಕೋಲುಪದ ಧಾಟಿಯಲ್ಲಿರುವ 'ಭೇದ ಮುಕ್ತಾವಲಿ' ಎಂಬ ಕೋಲು ಹಾಡಿಗೆ 'ಮುಯ್ಯದ ಹಾಡು' ಎಂದೂ ಹೆಸರಿದೆ. ಈ ಕೃತಿಯಲ್ಲಿ ತಾರತಮ್ಯ ವಿಷ್ಣು ಪಾರಮ್ಯ ಪಂಚಭೇದ ಮುಂತಾದ ದ್ವೈತ ದರ್ಶನದ ಪ್ರಮುಖ ಪ್ರಮೇಯಗಳನ್ನು ಬೀಗರ ಜೊತೆ ಸಂಭಾಷಿಸುವಂತಹ ನೂತನಶೈಲಿಯಲ್ಲಿ ಪ್ರಸ್ತುತ ಪಡಿಸಲಾಗಿದೆ.

ಪ್ರತ್ಯೇಕ ಪಲ್ಲವಿ, ಅಂಕಿತಗಳಂತೆ ರಾಗ, ತಾಳಗಳಿರುವ ಜಯ ಜಯ ಶ್ರೀ ರಮಾರಮಣ ಜಯ ಜಯ ಎಂದು ಪ್ರಾರಂಭವಾಗುವ ಕೀರ್ತನೆಗಳ

ಮಾದರಿಯ ಪ್ರತ್ಯೇಕ 34 ನುಡಿಗಳ ಸಂಗ್ರಹವೇ 'ನಾರದ ಕೊರವಂಜಿ', ಇದೇ ವಸ್ತು ಹಾಗೂ ಹೆಸರಿನ ಕೃತಿಯೊಂದು ವಾದಿರಾಜರಲ್ಲೂ ಕಂಡು ಬರುತ್ತದೆ. ರುಕ್ಮಿಣಿಯು ತನ್ನನ್ನು ಶಿಶುಪಾಲನಿಗೆ ವಿವಾಹಮಾಡಿಕೊಡುವ ವಿಚಾರವನ್ನು ಪ್ರಸ್ತಾಪಿಸಿ, ಕೃಷ್ಣನೇ ತನ್ನನ್ನು ವಿವಾಹವಾಗಬೇಕೆಂಬ ಪ್ರಾರ್ಥನಾ ಪತ್ರವನ್ನು ಅವನಿಗೆ ಕಳಿಸುತ್ತಾಳೆ. ಕೃಷ್ಣನು ತನ್ನನ್ನು ಸ್ವೀಕರಿಸುವನೋ ಇಲ್ಲವೋ ಎಂಬ ರುಕ್ಮಿಣಿಯ ಆತಂಕ ಪರಿಹಾರ, ಬ್ರಾಹ್ಮಣನ ಉತ್ತರದಿಂದ ಎಂಬುದು ಭಾಗವತದಲ್ಲಿದ್ದರೆ, ಕೊರವಂಜಿ ವೇಷದ ನಾರದರಿಂದ ಎಂಬುದು ಈ ಕೃತಿಯಲ್ಲಿದೆ.

ನಾರದಕೊರವಂಜಿಯಂತೆ, ಭಾಗವತದ ಕೃಷ್ಣಚರಿತೆ ಕಥಾವಸ್ತು ಹೊಂದಿದ ಪ್ರತ್ಯೇಕವಾದ ರಾಗ, ತಾಳ, ಅಂಕಿತಗಳಿರುವ ಸುದೀರ್ಘ ನುಡಿಗಳನ್ನು ಹೊಂದಿದ 67 ಕೀರ್ತನೆಗಳ ಸಂಕಲನ 'ಭಾಗವತ' ಭಾಗವತದ ಆದ್ಯಂತವನ್ನು ಹಾಡಾಗಿ, ವೃತ್ತವಾಗಿ, ದ್ವಿಪದಿಯಾಗಿ, ಸಂಪೂರ್ಣವಾಗಿ ಕನ್ನಡಿಸಿದವರು ಪ್ರಸನ್ನರಾಯರು[6] ಆದರೆ ಈಗ ಉಪಲಬ್ಧವಿರುವುದು ದಶಮಸ್ಕಂಧ ಪೂರ್ವಾರ್ಧದ 'ಕಂಸವಧೆ'ವರೆಗೆ ಮಾತ್ರ ಈ ಬಗ್ಗೆ ಸಂಶೋಧನೆ ಅಗತ್ಯವಾಗಿದೆ. ಗೋವರ್ಧನೋದ್ಧಾರ, ಗೋಪೀಗೀತೆ, ರಾಸಕ್ರೀಡೆ, ವಸ್ತ್ರಾಪಹರಣ, ವೇಣುಲೀಲೆ, ವರುಣಪಾಶ ಬಂಧ ವಿಮೋಚನ, ಸತ್ರದಡಿಗೆ ಊಟ, ಹೀಗೆ ಬೇರೆ ಬೇರೆ ಕಥಾ ಸಂದರ್ಭದ ವಿವಿಧ ಶೀರ್ಷಿಕೆಯ ಹಾಡುಗಳನ್ನು ಈ ಮೊದಲು ಪ್ರತ್ಯೇಕ ಕೃತಿಗಳೆಂದೇ[7] ಗುರುತಿಸಿದ್ದುಂಟು. ಮಾತ್ರವಲ್ಲ, ಇವುಗಳ ಮಧ್ಯದಲ್ಲಿ ನಾರಾಯಣ ಪಂಜರ, ಕೊರವಂಜಿ ಹಾಡು ಮುಂತಾದ ಇತರ ಪ್ರತ್ಯೇಕ ಕೃತಿಗಳ ಸೇರ್ಪಡೆಯೂ ಇದನ್ನು ದೃಢಪಡಿಸುವಂತಿದೆ[8] ಆ ಮೇಲೆ ಹತ್ತಾರು ವರ್ಷಗಳ ನಂತರ ಅವನ್ನೆಲ್ಲಾ ಸಂಕಲಿಸಿ "ಪ್ರಸನ್ನ ವೆಂಕಟದಾಸರ ಭಾಗವತ" ಎಂಬ ಶೀರ್ಷಿಕೆಯಡಿ ಒಂದೇ ಕೃತಿಯಲ್ಲಿ ಪ್ರಕಟಿಸಲಾಗಿದೆ.

---

6. ಕ.ಭ.ವಿಜಯ. ಬೇಲೂರು ಕೇ. ಪು.527.

7. ಪ್ರಸನ್ನವೆಂಕಟದಾಸರ ಹಾಡುಗಳು, ಸಂ. ಕಾವ್ಯಪ್ರೇಮಿ, ಪು.70–120.

8. ಅದೇ. ಪು.23.

ಇದರಂತೆ 'ಭೃಂಗನಿನ್ನಟ್ಟಿದನೆ' ಎಂದು ಪ್ರಾರಂಭವಾಗುವ 9 ನುಡಿಗಳ 'ಭ್ರಮರಗೀತೆಯು' ಪ್ರಸನ್ನವೆಂಕಟದಾಸರದು ಎನ್ನಲಾಗಿದೆ.[9] ಆದರೆ ಇದು ಶ್ರೀ ಶ್ರೀಪಾದರಾಜರ ಕೃತಿ ಎಂಬುದು ಸುಪ್ರಸಿದ್ಧ.

ಒಂದೇ ವಿಷಯವನ್ನು ಕುರಿತು 11ಕ್ಕೂ ಹೆಚ್ಚು ನುಡಿಗಳಲ್ಲಿ ವಿವರವಾಗಿ ವರ್ಣಿಸುವ ಕಲೆ ಪ್ರಸನ್ನ ವೆಂಕಟರಿಗೆ ಸಿದ್ಧಿಸಿದೆ. ದಾಸಸಾಹಿತ್ಯಕ್ಕೆ ಅಂಥ ಒಂದು ವೈವಿಧ್ಯತಂದು ಕೊಟ್ಟ ಶ್ರೇಯಸ್ಸು ಪ್ರಸನ್ನವೆಂಕಟರದ್ದು. ದಾಸಸಾಹಿತ್ಯ ದ್ವಿತೀಯ ಘಟ್ಟದ ದಿಗ್ಗಜರೆನಿಸಿದ ಶ್ರೀ ಮಹಿಪತಿರಾಯರು, ಶ್ರೀವಿಜಯದಾಸರು, ಶ್ರೀಗೋಪಾಲದಾಸರು ಇವರಲ್ಲಿ ಅಷ್ಟಾಗಿ ಕಾಣಿಸಿಕೊಳ್ಳದ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ಹೊರತು ಪಡಿಸಿ ದಾಸಸಾಹಿತ್ಯದ 'ಇತರ ಪ್ರಕಾರ'ಗಳ ರಚನೆ ಪ್ರಸನ್ನವೆಂಕಟದಾಸರಲ್ಲಿ ಅದು ವಿಶೇಷವಾಗಿ ಗಮನಸೆಳೆಯುತ್ತದೆ. ಮಾತ್ರವಲ್ಲ, ಹರಿಕಥಾಮೃತಸಾರ, ತತ್ವಸುವ್ವಾಲಿಗಳನ್ನು ರಚಿಸಿದ ಜಗನ್ನಾಥದಾಸರಂತೆ, ಕೋಲುಹಾಡು, ಹಸೆಗೆ ಕರೆಯುವ ಹಾಡು, ಬಾಗಿಲು ತೆರೆಯುವ ಹಾಡು, ಉರುಟಣೆಪದ ಮುಂತಾದ ಕೃತಿರಚಿಸಿದ ಮೋಹನದಾಸರು ಉರುಟಣೆಪದ ರಚಿಸಿದ 'ವಿಜಯಕವಚ' ಖ್ಯಾತಿಯ ವ್ಯಾಸವಿಠಲರು (ಕಲ್ಲೂರು ಸುಬ್ಬಣ್ಣದಾಸರು) ಮುಂತಾದವರಿಗೆ ಇತರ ಕೃತಿಗಳ ರಚನೆಗೆ ಪ್ರಸನ್ನವೆಂಕಟರಿಂದ ಪ್ರೇರಣೆದೊರೆತಿರಬಹುದಾದ ಸಾಧ್ಯತೆಯೂ ಇಲ್ಲದಿಲ್ಲ. ಹೀಗೆ ದ್ವಿತೀಯ ಘಟ್ಟ ದಾಸಸಾಹಿತ್ಯದ ಇತರ ಪ್ರಕಾರಗಳ ರಚನೆಗೆ ಚಾಲನೆ ನೀಡಿ ಪ್ರೇರಣಾಸ್ತೋರೆನಿಸಿದವರು ಪ್ರಸನ್ನವೆಂಕಟದಾಸರು.

ದೀರ್ಘಕೃತಿಗಳು, ಕೀರ್ತನೆ, ಸುಳಾದಿ, ಉಗಾಭೋಗ ಹೀಗೆ ಒಟ್ಟು ಪ್ರಸನ್ನವೆಂಕದಾಸರ ಕೃತಿಗಳಲ್ಲಿ ಹರಿ ಸರ್ವೋತ್ತಮತ್ವ ವಾಯು ಜೀವೋತ್ತಮತ್ವ, ತಾರತಮ್ಯ, ಪಂಚಭೇದ ಮುಂತಾದ ದ್ವೈತದರ್ಶನದ ಪ್ರಮೇಯಗಳಂತೆ, ಲೋಕನೀತಿ, ಆತ್ಮಶೋಧನೆ, ಅಂತರಂಗ ನಿವೇದನೆ ಮುಂತಾದವನ್ನು ಕಾಣುತ್ತೇವೆ. ನಾವು ಶ್ರದ್ಧಾಭಕ್ತಿಯಿಂದ ಭಗವಂತನಿಗೆ ಶರಣು ಹೋದರೆ ಅವನೊಬ್ಬನೇ ನಮ್ಮನ್ನು ಕಾಪಾಡಲು ಸಮರ್ಥ ಎಂಬುದನ್ನು ವೈಯಕ್ತಿಕ ನಡೆಯಲ್ಲಿ ಅನುಭವಿಸಿದ ದಾಸರು ತಮ್ಮ ನುಡಿಗಳ ಮೂಲಕ ಸಮಾಜಕ್ಕೆ ಬೋಧಿಸಿದ್ದಾರೆ.

---

**9. ಅದೇ ಪು.23,**

ಇಂತಹ ಶ್ರೀಪ್ರಸನ್ನವೆಂಕಟದಾಸರು (ಕ್ರಿ. ಶ. ಸು. 1680–1752) ಹಾಗೂ ಶ್ರೀವಿಜಯದಾಸರು (ಕ್ರಿ. ಶ. ಸು. 1682–1755) ಸಮಕಾಲೀನರಾಗಿದ್ದರೂ, ಒಬ್ಬರ ದೃಷ್ಟಿ ಮತ್ತೊಬ್ಬರೆಡೆಗೆ ಹರಿಯದಿರುವುದು ಸೋಜಿಗವೆನಿಸುತ್ತದೆ*. ಪ್ರಸನ್ನವೆಂಕಟದಾಸರು ಹಾಗೂ ವಿಜಯದಾಸರು ಇವರಲ್ಲಾದ ಭೇಟಿ, ಪರಿಚಯಗಳಿಗೆ ಯಾರ (ಪ್ರಸನ್ನವೆಂಕಟದಾಸರ) ಪದಗಳನ್ನು ಕೇಳಿ ವಿಜಯದಾಸರಂಥವರು ಇದು ಕಾಕಂಬಿ ಎಂದು ತಲೆದೂಗುತ್ತಿದ್ದರೋ ಅಂಥ ಪದಗಳನ್ನು ಹೇಳುವ ಅಭ್ಯಾಸ ಈ ಕಾಲಕ್ಕೆ ಮರೆತುಹೋಗಿದೆ.[10] ಎಂಬ ಮತೊಂದನ್ನು ಆಧಾರವಾಗಿ ಉಲ್ಲೇಖಿಸುವುದುಂಟು. ಆದರೆ ಇದು ಗಟ್ಟಿ ಆಧಾರವೆನಿಸುವುದಿಲ್ಲ ವಿಜಯದಾಸರು ಪ್ರಸನ್ನವೆಂಕಟದಾಸರನ್ನು ಪ್ರಶಂಸಿಸಿದ್ದಾರೆ. ದಾಸಸಾಹಿತ್ಯ ಪುನರುಜ್ಜೀವನಗೊಳಿಸಿ ಅದಕ್ಕೊಂದು ತಾತ್ವಿಕ, ಸೈದ್ಧಾಂತಿಕ ನೆಲೆಗಟ್ಟುಗಳನ್ನು ಒದಗಿಸಿದ ಮತ್ತು ಗೋಪಾಲದಾಸರು, ಜಗನ್ನಾಥದಾಸರು ಮುಂತಾದ ಶಿಷ್ಯ–ಪ್ರಶಿಷ್ಯ ಪರಂಪರೆಯ ಮೂಲಕ ದಾಸಸಾಹಿತ್ಯ ಗಂಗೆಯು ಭೋರ್ಗರೆದು ಹರಿಯಲು ಪ್ರೇರಕರಾಗಿದ್ದ ವಿಜಯದಾಸರಂಥವರನ್ನು ಪ್ರಸನ್ನವೆಂಕಟರು ಪ್ರಶಂಸಿಸದೇ ಉಲ್ಲೇಖಿಸದೆ ಇರಲು ಕಾರಣವೇನು? ಅದರಂತೆ ಗೋಪಾಲದಾಸರು, ಜಗನ್ನಾಥದಾಸರಂತಹ ಮುಂದಿನ ದಾಸಪರಂಪರೆಯವರು ಪ್ರಸನ್ನವೆಂಕಟರನ್ನು ಉಲ್ಲೇಖಿಸದಿರಲು ಕಾರಣವೇನು? ಈ ಮೌನ ಹರಿದಾಸ ಪರಂಪರೆಯಲ್ಲಿ ಮಹಿಪತಿರಾಯರಂತೆ ಪ್ರಸನ್ನವೆಂಕಟದಾಸರು ಉಪೇಕ್ಷಿತರಾಗಿದ್ದರೇ ಎಂಬ ಸಂದೇಹಕ್ಕೆ ಎಡೆಮಾಡಿಕೊಡುತ್ತದೆ. ಮಹಿಪತಿರಾಯರಷ್ಟು ಗೊಂದಲದ ಸಂಗತಿಗಳು[11] ಪ್ರಸನ್ನವೆಂಕಟದಾಸರಲ್ಲಿ ಇಲ್ಲ ನಿಜ. ಅದಕ್ಕೆಂದೇ ಮಹಿಪತಿರಾಯರ ಕೃತಿಗಳಿಗಿಂತ ಪ್ರಸನ್ನವೆಂಕಟದಾಸರ ಕೃತಿಗಳು ಹೆಚ್ಚು ಜನಪ್ರಿಯಗೊಂಡಿದ್ದಿರ ಬೇಕೆಂದೆನಿಸುತ್ತದೆ.

---

10. ಕ.ಭ.ವಿ., ಪು.394.

11. ದಾಸಸಾಹಿತ್ಯ ಒಂದು ಸೈದ್ಧಾಂತಿಕ ಅಧ್ಯಯನ, ಡಾ.ಆರ್.ಜಿ.ಗುಡಿ, ಪು.38.

(* ವಿ.ಸೂ.: ಇತ್ತೀಚಿಗೆ ಶ್ರೀವಿಜಯದಾಸರು ಶ್ರೀ ಪ್ರಸನ್ನವೆಂಕಟದಾಸರ ಮೇಲೆ ರಚಿಸಿದ ಕೃತಿ ಹಾಗೂ ಶ್ರೀಜಗನ್ನಾಥದಾಸರು ಪ್ರಸನ್ನವೆಂಕಟದಾಸರನ್ನು ಉಲ್ಲೇಖಿಸಿದ ಕೃತಿಗಳ ಹಾಸ್ತಪ್ರತಿ ದೊರೆಕಿವೆ ಹಾಗೂ ಪ್ರಕಟಣೆಗೊಂಡಿದೆ ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು ಸಂಪುಟ–2, ಪುಟ–282) – ಸಂಪಾದಕರು

ಸುಪ್ರಸಿದ್ಧರಾದ ದಾಸ ಚತುಷ್ಟಯರ ನಂತರ ಸಮಾಜದಲ್ಲಿ ಸತ್ಪುರುಷರೆಂಬ ಖ್ಯಾತಿ ಪಡೆದವರೂ, ಕನ್ನಡ ವಾಙ್ಮಯಸೇವೆ ಮಾಡಿದವರೂ ಯಾರಾದರಿದ್ದರೆ – ಆ ಪಂಕ್ತಿಯಲ್ಲಿ ಅಗ್ರಪೂಜೆಗೆ ಅರ್ಹರು ಪ್ರಸನ್ನವೆಂಕಟದಾಸರು[12] ಎಂಬ ಮಾತೂ ಇದಕ್ಕೆ ಪುಷ್ಟಿನೀಡುವಂತಿದೆ. ಜೊತೆಗೆ ರಾಘವೇಂದ್ರತೀರ್ಥರ ಸಮಕಾಲೀನರೂ ಪ್ರಸನ್ನವೆಂಕಟದಾಸರಿಗಿಂತ ಮುಂಚಿನವರೂ ಆಗಿದ್ದ ಮಹಿಪತಿದಾಸರ ಉಲ್ಲೇಖವಿಲ್ಲದಿರುವುದು ಗಮನಾರ್ಹ. ಅದೇನೇ ಇರಲಿ, 'ಯತೋದೆಯಮ್ಮ' ಎಂಬ ಪ್ರಸನ್ನವೆಂಕಟದಾಸರ ಕೀರ್ತನೆ ಬಾಲಭಾಷೆಯ ಮೂಲಕ ರಚನೆಗೊಂಡ ದಾಸಸಾಹಿತ್ಯದ ಏಕೈಕ ಕೃತಿ. ಇಂತಹ ವೈಶಿಷ್ಟ್ಯ ವೈವಿಧ್ಯಪೂರ್ಣ ರಚನಾ ಕೌಶಲದಿಂದ ದ್ವಿತೀಯ ಘಟ್ಟದ ಹರಿದಾಸ ಸಾಹಿತ್ಯ ಕಣಜ ತುಂಬಿದ ಮಹನೀಯರಲ್ಲಿ ಪ್ರಸನ್ನವೆಂಕಟದಾಸರು ಅಗ್ರಗಣ್ಯರೆಂಬುದನ್ನು ಮರೆಯಲಾಗದು.

ದ್ವೈತ ಸಿದ್ಧಾಂತದ ಬೆನ್ನೆಲುಬೆನಿಸಿದ ಹರಿಸರ್ವೋತ್ತಮತ್ವ ತತ್ವವು ವೇದ ಉಪನಿಷತ್ತುಗಳು, ಮಹಾಭಾರತ, ಭಾಗವತ ಮುಂತಾದ ಆಧಾರಗಳ ಹಿನ್ನೆಲೆಯಲ್ಲಿ ವಿವಿಧ ರೀತಿಯಿಂದ ವರ್ಣಿತವಾಗಿದೆ. ದ್ವೈತದರ್ಶನದ ಇನ್ನಿತರ ಪ್ರಮುಖ ತತ್ವಗಳು ಅಂದರೆ ಜಗತ್ತು ಸತ್ಯ, ಭೇದವು ಸತ್ಯ, ಜೀವಗಣ ಭಿನ್ನವಾಗಿದೆ, ಜೀವಗಣ ಹರಿಯ ಅಧೀನ, ಜೀವರಲ್ಲಿ ತಾರತಮ್ಯವಿದೆ, ಜೀವನ ನಿಜವಾದ ಸುಖಾನುಭವವೇ ಮುಕ್ತಿ, ನಿರ್ಮಲವಾದ ಭಕ್ತಿ ಮುಕ್ತಿಗೆ ಸಾಧನ. ಪ್ರತ್ಯಕ್ಷ, ಅನುಮಾನ ಹಾಗೂ ಆಗಮ ಇವು ಮೂರು ಪ್ರಮಾಣಗಳು. ಶ್ರೀಹರಿ ಸರ್ವವೇದ ಪ್ರತಿಪಾದ್ಯ ಮುಂತಾದವು ಹರಿಸರ್ವೋತ್ತಮತ್ವ ತತ್ವಕ್ಕೆ ಪೂರಕ, ಪೋಷಕ ಹಾಗೂ ಪ್ರತಿ ಪಾದಕಗಳೆಂದಾಗ ಈ ತತ್ವದ ಮಹತ್ವ ಸ್ವಯಂವೇದ್ಯವಾಗುತ್ತದೆ. ಅಂತೆಯೇ ಮಧ್ವರು ವಿವಿಧೆಡೆ ಹರಿಸರ್ವೋತ್ತಮತ್ವವನ್ನು ಪ್ರತಿಪಾದಿಸಿರುವುದು ಸಹಜವಾಗಿದೆ.

'ಅಶೇಷಗುಣ ಪೂರ್ಣತ್ವಂ ಸರ್ವದೋಷ ಸಮುಜ್ಝಿತಿಃ।ವಿಷ್ಣೋರನ್ಯಚ್ಚ ತತ್ತಂತ್ರಂ ಇತಿ ಸಮ್ಯಗ್ವಿನಿರ್ಣಯಃ॥[13] ಅಂದರೆ ಸರ್ವಗುಣ

**12. ಕ. ಭ. ವಿ. ಪು.520, ಲಕ್ಷ್ಮೀಕಾಂತ ಪಾಟೀಲರು ಪ್ರಕಟಿಸಿದ ಗೋಪಾಲದಾಸರ ಕೃತಿ ಏಕೈಕ ಆಕರವಾಗಿದ್ದು ಸಂಶೋಧನೆ ಅಗತ್ಯ.**

**13. ಅನುವ್ಯಾಖ್ಯಾನ – ಆನಂದತೀರ್ಥರು, 1–1–1,**

ಪರಿಪೂರ್ಣನಾಗಿರುವುದು, ಸರ್ವದೋಷದೂರನಾಗಿರುವುದು ಹಾಗೂ ಇತರವೆಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವುದು ಇದೇ ಸರ್ವೋತ್ತಮತ್ವದ ಲಕ್ಷಣ. ಇದು ಶ್ರೀಹರಿಯಲ್ಲಿ ಮಾತ್ರ ಇದೆ. ಪರಮಾತ್ಮನು ಜ್ಞಾನಾನಂದಾದಿಸರ್ವಗುಣ ಪರಿಪೂರ್ಣ. ಮಾತ್ರವಲ್ಲ, ಅವನಲ್ಲಿಯ ಒಂದೊಂದು ಗುಣಗಳೂ ಅನಂತ. ಹಾಗೆಯೇ ಅವನು ಅಜ್ಞಾನ, ದುಃಖ ಮುಂತಾದ ಸಕಲ ದೋಷಗಳಿಂದ ದೂರನಾಗಿದ್ದಾನೆ. ಅವನು ಸರ್ವವ್ಯಾಪ್ತನೂ ಹೌದು. ಅವನು ಅನೇಕ ರೂಪಗಳಿಂದ ಜಗತ್ ಸೃಷ್ಟ್ಯಾದಿಗೈಯುವುದರ ಜೊತೆಗೆ ವಿವಿಧ ಅವತಾರಗಳಿಂದ ದುಷ್ಟ ಸಂಹಾರ, ಶಿಷ್ಟ ರಕ್ಷಣೆ ಮಾಡುವನು. ಅವನ ಮೂಲರೂಪ ಹಾಗೂ ಅವತಾರ ರೂಪದ ಜ್ಞಾನ ಸಾಮರ್ಥ್ಯ ಮುಂತಾದವುಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಅವನು 'ಸ್ವಗತಭೇದ ವಿವರ್ಜಿತನಾ'ದಂತೆ 'ಸ್ವರಮಣ'ನೂ ಆಗಿದ್ದಾನೆ. ಅಷ್ಟೇ ಅಲ್ಲ ಬ್ರಹ್ಮಾದಿ ಸಕಲ ಜೀವರಾಶಿ ಅವನ ವಶವಾಗಿದೆ.ಶ್ರೇಷ್ಠ ಜ್ಞಾನಿ ಎನಿಸಿದ ಲಕ್ಷ್ಮಿಯೂ ಅವನ ಮಡದಿಯಾಗಿ ಅವನ ಅಧೀನಳು. ಹೀಗೆ ಸರ್ವಸ್ವಾಮಿ ಸರ್ವಸ್ವತಂತ್ರ, ಸರ್ವಕರ್ತೃ ಎಂದೆಲ್ಲ ಎನಿಸಿರುವ ಪರಮಾತ್ಮನು 'ಸರ್ವಗುಣ' ಪರಿಪೂರ್ಣನಾಗಿದ್ದಾನೆ. ಅದರಂತೆ ಬ್ರಹ್ಮಾದಿ ದೇವತೆಗಳೆಲ್ಲರೂ ಒಂದಲ್ಲ ಒಂದು ದೋಷಕ್ಕೆ ತುತ್ತಾಗಿರುವುದರಿಂದ 'ಸರ್ವದೋಷ ದೂರ'ನಾದವನೂ ಸಹ ಇವನೊಬ್ಬನೆ. ಸರ್ವದೋಷ ದೂರನಾಗಿದ್ದರಿಂದ ಅವನೇ 'ಸರ್ವೋತ್ತಮ' ಎನ್ನುತ್ತದೆ ದ್ವೈತದರ್ಶನ.

ಸಮಗ್ರ ಮಧ್ವಸಿದ್ಧಾಂತವನ್ನು ಸೂರೆಗೊಂಡ ಹರಿದಾಸರು ಹರಿಸರ್ವೋತ್ತಮತ್ವದಂತಹ ಕಠಿಣ ಪ್ರಮೇಯಗಳನ್ನು ಸಹ ತಮ್ಮ ಕೃತಿಗಳ ಮೂಲಕ ದ್ರವೀಕರಿಸಿ ಕೊಟ್ಟಿದ್ದಾರೆ. ಇದು ಶ್ರೀಸಾಮಾನ್ಯನಿಗೆ ತತ್ವಜ್ಞಾನ ತಲುಪಿಸಬೇಕೆಂಬ ದಾಸರಲ್ಲಿಯ ತೀವ್ರವಾದ ಸಾಮಾಜಿಕ ಕಳಕಳಿಗೆ ನಿದರ್ಶನ ಅಲ್ಲದೆ ದಾಸರಲ್ಲಿದ್ದ ಉನ್ನತ ತತ್ವಜ್ಞಾನದಂತೆ ಆಳವಾದ ಪಾಂಡಿತ್ಯ ಪ್ರತಿಭೆಗಳೂ ಇದರಿಂದ ವ್ಯಕ್ತವಾಗುತ್ತದೆ.

ಹರಿಸರ್ವೋತ್ತಮತ್ವ ವಿಚಾರವೆಂದರೆ ಹರಿದಾಸರಿಗೆ ಎಲ್ಲಿಲ್ಲದ ಹುರುಪು. ದಾಸರ ಆರಾಧ್ಯದೈವವೆನಿಸಿದ ಅಂತರಂಗದ ಸರ್ವೋತ್ತಮ ಶಕ್ತಿಯನ್ನು ಕೊಂಡಾಡಲು ಅವರ ಹುಮ್ಮಸ್ಸು ಒಮ್ಮೆಲೇ ಚಿಮ್ಮತೊಡಗುತ್ತದೆ. ಹೊಡಿ ನಗಾರಿ ಮೇಲೆ ಕೈಯ ಘಡ ಘಡ... ಜಗದೊಡೆಯ ಶ್ರೀಹರಿ....... ಈ ಪೃಥ್ವಿಯೊಳಗೆ ವ್ಯಾಪಕನಾಗಿಹ ಶ್ರೀಪತಿ ಪರನೆಂದು[14] ಎಂದು ಎಲ್ಲೆಡೆ ಕೇಳಿಸುವ ಹಾಗೆ ನಗಾರಿ ಬಾರಿಸುವಂತೆ ಹೇಳುತ್ತಿದ್ದರೆ –

**ಭೇರಿ ಬಾರಿಸುತಿದೆ ಭೂರಿ**

**...........................**

**ಬ್ರಹ್ಮರುದ್ರೇಂದ್ರಾದಿ ಸುಮ್ಮನಸರನಾಳ್ವ**
**ರಮ್ಮೆಯರಸ ಸರ್ವೋತ್ತಮ**
**ಧರ್ಮೋದ್ಧಾರ ಅಧರ್ಮ ಸಂಹರ ಪರ**
**ಬ್ರಹ್ಮ ವಾಸುದೇವ ಬ್ರಹ್ಮಣ್ಯದೇವನೆಂದು**[15]

ಎಂದು ಪ್ರಸನ್ನವೆಂಕಟದಾಸರು ನಗಾರಿ ಶಬ್ದ ಕೇಳಿರೆಂದು ಆಹ್ವಾನಿಸಿದ್ದಾರೆ. ಜಿದ್ದು ಕಟಲೂ ಸಹ ಸಿದ್ಧರಾಗಿದ್ದಾರೆ. ನಿಮ್ಮ ಭಾಗ್ಯ ದೊಡ್ಡದೊ, ನಮ್ಮ ಭಾಗ್ಯ ದೊಡ್ಡದೊ ಸಮ್ಮಲೆಂದ ನಾವು ನೀವು ಸಾಟಿ ಮಾಡಿನೋಡುವ ಬನ್ನಿ[16] ಎಂದು ಸರ್ವೋತ್ತಮತ್ವ ವಿಷಯದಲ್ಲಿ ಯಾರಾದರೂ ಜಿದ್ದು ಕಟ್ಟುವವರಿದ್ದರೆ ಬನ್ನಿರಿ ಎಂದು ಆಹ್ವಾನಿಸುತ್ತಾರೆ. ಜೊತೆಗೆ ಆ ಪಣ ಗೆಲ್ಲುವುದು ತಾವೇ ಎಂದು ನಿಮ್ಮ ಭಾಗ್ಯ ಲಕ್ಷ್ಮಿದೇವಿ ನಮ್ಮ ಭಾಗ್ಯ ನಾರಾಯಣನು ಎಂದು ಆತ್ಮವಿಶ್ವಾಸವನ್ನು ತೋರ್ಪಡಿಸಿದ ರೀತಿಯೂ ಸಹ ಅಷ್ಟೇ ಸ್ವಾರಸ್ಯ ಪೂರ್ಣವಾಗಿದೆ. ಇಂತಹ ಹರಿಸರ್ವೋತ್ತಮತ್ವ ವಿಚಾರ ಅನುಭವಕ್ಕೆ ಬಾರದೆ ಆ ನಿಲುವು ಧೃಡವಾಗದೆ. ಹಿಯಿಲ್ಲದನ್ಯತ್ರ ದೈವಗಳುಂಟೆಂದು ಉರಗನ ಮುಡಿಯನಾರಾದರೆತ್ತಲಿ[17]

14. ಪು.ಸಾ.ದ. ಭಾಗ–2, ಪು.221.

15. ಸಮಗ್ರ ದಾಸಸಾಹಿತ್ಯ, ಸಂಪುಟ–8, ಪು.402.

16. ಪು.ಸಾ.ದ. ಭಾಗ–2, ಪು.221.

17.ಮಾಹಾತ್ಮ್ಯಜ್ಞಾನ, ಪು.140.

ಎಂದು ಸವಾಲೊಡ್ಡವುದು ಸಾಮಾನ್ಯ ಸಂಗತಿಯೇನಲ್ಲ. ಇಷ್ಟೇ ಅಲ್ಲ ಹರಿಸರ್ವೋತ್ತಮನಲ್ಲವೆಂಬುದು ಸಾಬೀತಾದರೆ ತಾವು ಎಂತಹ ಕಠಿಣ ಪರೀಕ್ಷೆಗೂ ಸಿದ್ಧ. ವಿಹಿದಿತ ದೈವಗಳೆಲ್ಲ ವಿಷ್ಣುವಿನ ಹಿಂದೆ ಇದಕೆ (ತಪ್ಪಿದರೆ) ನಾ ಫಣಿ ಫಣವ ಕೈಯಾಗೆ ಪಿಡಿವೆ[18] ಎಂದು ಸವಾಲು ಸ್ವೀಕರಿಸಿರುವ ದಾಸರ ಕೆಚ್ಚೆದೆ, ಶ್ರದ್ಧೆ ವಿಶ್ವಾಸ ನಿಜಕ್ಕೂ ಮೆಚ್ಚಬೇಕಾದುದು.

ಹರಿದಾಸರಲ್ಲಿ ಕಂಡುಬರುವ ಹರಿಸರ್ವೋತ್ತಮತ್ವದ ಬಗೆಗಿನ ಈ ಒಲವು ತಾತ್ಕಾಲಿಕ ಅಥವಾ ಅನುಷಂಗೀಕವಾಗಿರದೆ ಅದು ಆಳವಾದ ಶ್ರದ್ಧೆ ಹಾಗೂ ಅಚಲವಾದ ನಿಷ್ಠೆಗಳ ನಿಲುವಾಗಿತ್ತೆಂಬುದಕ್ಕೆ ವಿದಿತ ದೈವರೊಳಗೆ ವಿಷ್ಣು ಉತ್ತಮನೆಂದು ವೇದಗಳ ಒಡನುಡಿ ಸಲೆ[19] ಎಂದು ವಾದಿರಾಜರು ಉಕ್ಕುವ ತುಪ್ಪಕ್ಕೆ ಕೈಯಿಕ್ಕುವೆ ನಾನು ಚಕ್ರಧರ ಪರಮಾತ್ಮನೊಬ್ಬನಲ್ಲದಿಲ್ಲವೆಂದು[20] ಎಂದು ವ್ಯಾಸರಾಜರೇ ಮುಂತಾದ ಅನೇಕ ಹರಿದಾಸರು ಕೈಗೊಂಡ ಭೀಕರ ಪ್ರತಿಜ್ಞೆಗಳೇ ಸಾಕ್ಷಿಯಾಗಿವೆ. ಫುಲ್ಲಲೋಚನ ಪೂರ್ಣ ಬ್ರಹ್ಮನೆಂಬುದನು ಅಜ ಜ್ಞಾನಾಧಿಕ ಬಲ್ಲ। ಅನಲ ಸ್ನೇಹಿತ ಬಲ್ಲ। ಭುಜಗೇಶ್ವರ ಬಲ್ಲ ಭುರಿ ಲೋಚನ ಬಲ್ಲ......... ತ್ರಿಜಗಾಧಿಪ ತ್ರಿವಿಕ್ರಮನೆಂಬುದನು।[21] ಎಂದು ಕನಕದಾಸರು "ನಾರದಮುನಿಬಲ್ಲ.... ಪಾರಾಶರಬಲ್ಲ ಮನು ಬಲ್ಲನು। ಧ್ರುವ ಬಲ್ಲ ದ್ರೌಪದಿ ಬಲ್ಲಳು.... ಧರೆಯೀರೇಳಕ್ಕೆ ಹರಿಯಲ್ಲದಿಲ್ಲವೆಂದು। ಎಂದು ಪುರಂದರದಾಸರು ವಿವಿಧ ಸಾಕ್ಷಿಗಳ ಮೂಲಕ ಹರಿಯು ಸರ್ವೋತ್ತಮ ಎಂಬುದನ್ನು ಸಮರ್ಥಿಸಿದ ಇವರ ಈ ತಂತ್ರ ವಿನೂತನವಾಗಿದೆ. ನಾಲ್ಕುಜನರ ಮಾತನ್ನಾದರೂ ಕೇಳಿ ಎಂಬ ಲೋಕರೂಢಿಯ ಸೌಜನ್ಯ ಪೂರ್ಣ ಮಾತಿನ ತಂತ್ರದಂತೆ, ವಿವಿಧ ಸಾಕ್ಷಿಗಳ ಮೂಲಕ ವಿವಾದ ಬಗೆಹರಿಸುವ ನ್ಯಾಯಾಲಯದ ಒಂದು ಅನುಕರಣೆಯೂ ಸಹ ಇಲ್ಲಿ ಅಡಗಿರುವುದು

**18. ಪು.ಸಾ.ದ. ಭಾಗ–2, ಪು. 211.**

**19. ಶ್ರೀ ವಾದಿರಾಜರ ಕೃತಿಗಳು, ಪು.10.**

**20. ವ್ಯಾಸರಾಯರ ಹಾಡುಗಳು, ಸಂ., ಕಾವ್ಯಪ್ರೇಮಿ, ಪು.42.**

**21. ಕ.ಹ.ಕೀ.ತ. ಭಾಗ–2, ಪು.20.**

ಗಮನಾರ್ಹ. ಬ್ರಹ್ಮ ರುದ್ರರೇ ವಿಷ್ಣುವನ್ನು ಸರ್ವೋತ್ತಮನೆಂದು ಒಪ್ಪಿಕೊಂಡಾಗ ವಿಷ್ಣು ಸರ್ವೋತ್ತಮ ಎಂಬುದು ನಿರ್ವಿವಾದವಾಗುತ್ತದೆ ಎನ್ನುವ ಈ ತಂತ್ರ ಮಾರ್ಮಿಕವೆನಿಸುತ್ತದೆ.

ಇದರಂತೆ "ಹರಿ ಸರ್ವೋತ್ತಮ ಹರಿಪರಬ್ರಹ್ಮ ಹರಿಸಮರಾರಿಲ್ಲ ಹರಿಯರುಂಟೆಲ್ಲಿ[22] ಎನ್ನುವ ಪ್ರಸನ್ನವೆಂಕಟದಾಸರು ಲೋಕದಲ್ಲಿ ಆರು ರಸಗಳು ಮಾತ್ರ ಪ್ರಸಿದ್ಧ ಏಳನೆಯ ರಸವೇ ಇಲ್ಲ. ಎಂಟನೆಯ ರಸುಂಟೆನ್ನುವ ಮಾತು ಅನುಭವ ವಿರುದ್ಧ. ಹರಿಗೆ ಸಮರೇ ಇಲ್ಲವೆಂದಾಗ ಅವನಿಗಿಂತ ಉತ್ತಮನು ಇದ್ದಾನೆಂಬುದು ಅನುಭವ ವಿರುದ್ಧವೆನಿಸುತ್ತದೆ ಎಂದು ತಾರ್ಕಿಕಯುಕ್ತಿಯಿಂದ ಹರಿಸರ್ವೋತ್ತಮತ್ವವನ್ನು ಪ್ರಸ್ತುತ ಪಡಿಸಿರುವುದು ಗಮನಾರ್ಹ. ಈ ಸಂದರ್ಭದಲ್ಲಿ ಲಕ್ಷ್ಮೀಕಾಂತ ಸಮಂತತೊ ವಿಕಲಯನ್ ಎಂದು ಮುಂತಾಗಿ ನಖಸ್ತುತಿಯಲ್ಲಿ ಹರಿಸರ್ವೋತ್ತಮತ್ವವನ್ನು ವರ್ಣಿಸುವ ಆಚಾರ್ಯಮಧ್ವರ ಮಾತು ನೆನಪಾಗದೆ ಇರಲು ಸಾಧ್ಯವಿಲ್ಲ.

ದಾಸರು ಹರಿಸರ್ವೋತ್ತಮತ್ವದ ಕಲ್ಪನೆಯನ್ನು ಸಂಗ್ರಹವಾಗಿ ಹಾಗೂ ಸುಲಭವಾಗಿ ಮೂಡಿಸಬಲ್ಲರೆಂಬುದಕ್ಕೆ ಈ ಪರಿಯ ಸೊಬಗಾವ ದೇವರಲಿ ಕಾಣೆ ಎಂಬ ಪುರಂದರದಾಸರ ಕೃತಿಯೇ ನಿದರ್ಶನ. ಇದನ್ನು ಪೂರ್ಣವಾಗಿಯೇ ಸವಿದಾಗ ಅಧಿಕ ಸ್ವಾರಸ್ಯಾನುಭವ ಉಂಟಾಗುತ್ತದೆ. ದೊರೆಯತನದಲಿ ನೋಡೆ ಧರಣಿದೇವಿಗೆ ರಮಣ। ಸಿರಿಯತನದಲಿ ನೋಡೆ ಶ್ರೀಕಾಂತನು। ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ। ಗುರುವುತನದಲಿ ನೋಡೆ ಜಗದಾದಿ ಗುರುವು॥1॥ ಪಾವನತ್ವದಿ ನೋಡೆ ಅಮರಗಂಗಾಜನಕ। ದೇವತ್ವದಲಿ ನೋಡೆ ದಿವಿಜರೊಡೆಯ। ಲಾವಣ್ಯದಲಿ ನೋಡೆ ಲೋಕಮೋಹಕನಯ್ಯ। ಆವ ಧೈರ್ಯದಿನೋಡೆ ಅಸುರಾಂತಕ॥2॥ ಗಗನದಲಿ ಸಂಚರಿಪ ಗರುಡದೇವನೆ ತುರಗ। ಜಗತೀಧರ ಶೇಷ ಪರಿಯಂಕಶಯನ। ನಿಗಮಗೋಚರ ಪುರಂದರ ವಿಠಲಗಲ್ಲದೆ ಮಿಗಿಲಾದ

22. ಪು.ಸಾ.ದ. ಭಾಗ-3, ಪು.220.

ದೈವಗಳಿಗೀ ಭಾಗ್ಯವುಂಟೆ ॥3॥[23] ಎಲ್ಲ ವಿಷಯಗಳಲ್ಲಿ ನಿಜವಾದ ದೊರೆತನ ಒಡೆತನಗಳನ್ನು ಪಡೆದವನೇ ಸರ್ವೋತ್ತಮ ಎಂಬುದರಲ್ಲಿ ಎರಡು ಮಾತಿಲ್ಲ. ದೊರೆತನ, ಸಿರಿತನ, ಹಿರಿತನ ಹಾಗೂ ಗುರುತನ ಇವು ವ್ಯಕ್ತಿಯ ಜ್ಯೇಷ್ಠತ್ವ ನಿರ್ಧಾರಕ ಅಂಶಗಳು ಹಾಗೆಯೇ ಪಾವನತ್ವ, ದೇವತ್ವ, ಲಾವಣ್ಯ, ಧೈರ್ಯ ಮುಂತಾದವೆಲ್ಲವೂ ವಿಷ್ಣುವಿನಲ್ಲಿ ಮಾತ್ರವಿರುವುದರಿಂದ ಅವನೇ ಸರ್ವೋತ್ತಮ ಎಂಬ ಯುಕ್ತಿ ಪೂರ್ವಕವಾದ ಈ ವರ್ಣನೆ ಅಪೂರ್ವವಾಗಿದೆ. ಅನ್ಯಮತನಿಂದನೆಯಿಲ್ಲದೆ ಸ್ವಮತ ಶ್ರೇಷ್ಠತೆಯನ್ನು ಮೆರೆದ ದಾಸರ ಈ ಕೌಶಲ್ಯ ಎಂಥವರನ್ನು ತಲೆದೂಗಿಸುವಂತಹದು.

"ಪರಮಾತ್ಮನು ಚೇತನಾಚೇತನಾತ್ಮಕವಾದ ಈ ಸಮಸ್ತ ಪ್ರಪಂಚದ ಒಳಹೊರಗೆ ವ್ಯಾಪಿಸಿದ್ದಾನೆ" ಎನ್ನುವ ನಾರಾಯಣೋಪನಿಷತ್ತಿನ ವಿಚಾರದ ಜೊತೆಗೆ ಪರಮಾತ್ಮನು ಸಕಲ ಜೀವರ ಅಂತರ್ಯಾಮಿಯಾಗಿದ್ದು, ಅವರ ಸಕಲ ಕರ್ಮಗಳಿಗೆ ಪ್ರೇರಕನಾಗಿದ್ದಾನೆ ಎಂದು ವಿವರಿಸುವ ಮಾಂಡುಕ್ಯೋಪನಿಷತ್ತಿನ ವಿಚಾರಗಳನ್ನು ಎಲ್ಲಿ ನೋಡಲು ನೀನಿಲ್ಲದ ಸ್ಥಳವಿಲ್ಲ। ಎಲ್ಲರಂತರ್ಯಾಮಿ ಎಲ್ಲ ಪೂರ್ಣನು ನೀನೆ। ಹುಲ್ಲು ಕಾಷ್ಠ ಅಚೇತನಗಳಲ್ಲಿ ನೀ। ನಿಲ್ಲದಿಲ್ಲವೆಂದು ಎಲ್ಲ ಸಾರುತಲಿದೆ[24] ಎಂದು ತಿಳಿಗನ್ನಡದಲ್ಲಿ ಗೋಪಾಲದಾಸರು ಹರಳುಗೊಳಿಸಿದ್ದಾರೆ. ಪರಮಾತ್ಮನು ಸರ್ವವ್ಯಾಪ್ತ ಎಂಬುದು ಸಮಸ್ತ ವೇದಾಂತ ವಾಙ್ಮಯದ ಒಕ್ಕೊರಲಿನ ಕೂಗೆಂಬುದನ್ನು ಎಲ್ಲ ಸಾರುತಲಿದೆ ಎಂದು ಸೂಚಿಸಿ ಅದರ ಮಹತ್ವವನ್ನು ಮನಗಾಣಿಸಿಕೊಟ್ಟಿದ್ದಾರೆ. ಶಾಸ್ತ್ರಗಳಲ್ಲಿಯಂತೆ ಪರಮಾತ್ಮನ ಈ ಸರ್ವವ್ಯಾಪ್ತಿಯ ವಿಚಾರ ಹರಿದಾಸ ಕೃತಿಗಳಲ್ಲೂ ವ್ಯಾಪ್ತವಾಗಿದೆ. ಹೊರಗಿಪ್ಪ ಒಳಗಿಪ್ಪ ಹೊರಗಿರಲರಿಯ। ಒಳಗಿಪ್ಪ ಹೊರಗಿಪ್ಪ ಒಳಗಿರಲರಿಯ। ಒಳಗೆ ಹೊರಗೆ ತುಂಬಿಕೊಂಡಿಹ। ತಾನಿಲ್ಲದ ಠಾವು ಎಳ್ಳಿನಷ್ಟಿಲ್ಲ। ಸರ್ವ ವಿಷ್ಣು ವಾಸುದೇವ ಪರಿಪೂರ್ಣ[25] ಎಂದು

23. ಸಮಗ್ರ ದಾಸಸಾಹಿತ್ಯ, ಸಂ.8, ಪು.402–3.

24. ಪು.ಸಾ.ದ. ಭಾಗ–3, ಪು.24.

25. ಗೋಪಾಲವಿಠ್ಠಲ ಸುಳಾದಿಗಳು, ಪು.155.

ಪರಮಾತ್ಮನ ಸರ್ವವ್ಯಾಪ್ತಿಯನ್ನು ಪರಿಚಯಿಸಹೊರಟ ಪುರಂದರದಾಸರು ಎಲ್ಲಕ್ಕಿಂತ ಅತೀವ ದೂರನಾದವನು ಹಾಗೆಯೇ ಎಲ್ಲಕ್ಕಿಂತ ಸನಿಹದವನು ಪರಮಾತ್ಮನೆ ಎಂದು ಮುಂತಾಗಿ ವಿವರಿಸುವ ಈಶಾವಾಸ್ಯೋಪನಿಷತ್ತನ್ನು[26] ನೆನಪಿಸಿದ್ದಾರೆ. ಮುಂದುವರೆದು ಪರಮಾತ್ಮನು ಎಲ್ಲರಲ್ಲಿ ನೆಲಸಿದ್ದರಿಂದ ವಾಸುದೇವನೆನಿಸಿದ್ದಾನೆ ಎಂಬ ಭಾಗವತದ ವಿಚಾರ[27]ವನ್ನು ಅಣೋರಣೀಯನ ಮಹತೋಮಹೀಯನ ಅಪ್ರಮೇಯನ ಎಂಬ ನುಡಿಯ ಹಿಂದಿರುವ "ಅಣೋರಣೀಯಾನ್ ಮಹತೋಮಹೀಯನ್ ಎಂಬ ಕಾಠಕೋಪನಿಷತ್ತಿನ ರಹಸ್ಯವನ್ನು ಅವರೇ ತಮ್ಮ ಮತ್ತೊಂದು ಸುಳಾದಿಯಲ್ಲಿ ಭೇದಿಸಿದ್ದಾರೆ.[28] ಪರಮಾತ್ಮನು ಅಣೂವಿಗಿಂತಲೂ ಅಣು, ಮಹತ್ತಿಗಿಂತಲೂ ಮಹತ್ತು ಎಂಬ ಅವರ ಅಣುತ್ವ ಮಹತ್ವ ಸಾಮರ್ಥ್ಯವನ್ನು ತಿಳಿಸುವ ಅಣೋರಣೀಯಾನ್ ಮಹತೋಮಹೀಯಾನ್ ಎಂಬ ಮೂಲವಾಕ್ಯವನ್ನೇ ಒಂದೆಡೆ ಅನುಕರಿಸಿದ್ದಾರೆ, ಮತ್ತೊಂದೆಡೆ ಅನುವಾದಿಸಿದ್ದಾರೆ[29] ಅದರಂತೆ ಇಲ್ಲಿ ಯಥಾವತ್ತಾಗಿ ಉದ್ಧರಿಸಿರುವುದು ಗಮನಾರ್ಹ.

ಇದರಂತೆ, ಸರ್ವ ಜಗದಲ್ಲಿ ನೀನೇ ವ್ಯಾಪ್ತ ಜಗವೆಲ್ಲ। ಸರ್ವಕಾಲದಿ ನಿಮ್ಮಧೀನವೆಂಬ। ಸರ್ವಜಡ ಚೇತನರ ಸ್ರಷ್ಟಾರದಾತಾರ। ಹಂತಾನಿಯಂತಾ ನೀನೇ ಎಂಬ। ಸರ್ವತ್ರಾವಿಷ್ಟ ಉತ್ಕಷ್ಟ ನೀನೇ ಎಂಬ। ಸರ್ವವಿಜ್ಞಾನ ವಿಜ್ಞೇಯನೆಂಬ। ಸರ್ವಜ್ಞ ಗುರು ಹೃದಯಧಾಮ[30] ಎಂಬುದಾಗಿ ಪ್ರಸನ್ನವೆಂಕಟದಾಸರು "ಅಂತರ್ಬಹಿಶ್ಯತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ" ಸಹಸ್ರಶೀರ್ಷಾ ಪುರುಷಃ, ವಿಶ್ವತಶ್ಚಕ್ಷುಃ, ಸರ್ವಭೂತಸ್ಥ ಮಾತ್ಮನಂ, ಸರ್ವಭೂತಾನಿಚಾತ್ಮನಿ ಮುಂತಾದ ಉಪನಿಷತ್ ಹಾಗೂ ಭಗವದ್ಗೀತೆಗಳಲ್ಲಿ

26. ಪು.ಸಾ.ದ. ಭಾಗ-4, ಪು.195.

27. ದೂರಾದ್ದೂರತರಂ ಮತ್ತು ತದೇವಾಂರ್ತಿಮಂತಿರೌತ್.

28. ವಾಸನಾತ್ ವಾಸುದೇವೋಽಸಿ.

29. ಪು.ಸಾ.ದ. ಭಾಗ-4, ಪು.200.

30. ತತ್ವಸುವ್ವಾಲಿ, ಪು.44.

ನಿರೂಪಣೆಗೊಂಡ ಶ್ರೀಹರಿಯ ಸರ್ವವ್ಯಾಪ್ತತ್ವವನ್ನು ಪ್ರಸ್ತುತ ಪಡಿಸಿದ್ದಾರೆ. ಮಾತ್ರವಲ್ಲ ಹರಿಕೊಡದಾರು ಕೊಡುವರಿಲ್ಲ ನರರನು ಬೇಡಲ್ಯಾಕೆ ಶ್ರೀ। ಹರಿಕೊಟ್ಟರುಂಟು ಹಗಲಿರುಳು ಒಣಹಂಬಲ್ಯಾಕೆ ಎನ್ನುವ ಮೂಲಕ ಇಲ್ಲಿ ಎರಡನೆಯ ಸಾಲಿನಿಂದ ಈಶಾವಾಸ್ಯ ಮಿದಂ ಸರ್ವಂ ಎಂಬ ಈಶಾವಾಸ್ಯೋಪನಿಷತ್ತಿನ ಮತ್ತು ಆತ್ಮಾವಾಸ್ಯ ಮಿದಂ ಸರ್ವಂ ಎಂಬ ಭಾಗವತದ ಮಾತುಗಳನ್ನು ದಾಸರು ಸಂಗ್ರಹಿಸಿದ್ದಾರೆ. ಜೊತೆಗೆ ಸ್ರಷ್ಟಾಪಾತಾ ತಥೈವಾತ್ತಾ ನಿಖಿಲೆಸ್ಯೈಕ ಏವತು ಉತ್ಪತ್ತಿ ಸ್ಥಿತಿ ಸಂಹಾರ ನಿಯತಿಜ್ಞಾನ ಮಾವೃತಿಃ ಬಂದ ಮೋಕ್ಷಾ ಚ ಪುರುಷಾತ್ ಯಸ್ಮಾತ್ ಸ ಹರಿರೇಕರಾಟ್ ಎಂದು ಮುಂತಾಗಿ ಮಧ್ವರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಉದ್ಧರಿಸಿದ ಮಾತುಗಳೂ ಸಹ ಇಲ್ಲಿಯ ಮೂರು ಹಾಗೂ ನಾಲ್ಕನೆಯ ಸಾಲುಗಳನ್ನು ಓದುವಾಗ ತಾನಾಗಿಯೇ ಸುಳಿದುಹೋಗುವುದು ಗಮನಾರ್ಹ.

ಪರಮಾತ್ಮನ ಅವಯವ ಅಥವಾ ಇಂದ್ರಿಯಗಳಲ್ಲಿ ಭೇದವಿಲ್ಲ ಅವನು ಯಾವುದೇ ಒಂದು ಇಂದ್ರಿಯದಿಂದ ಪಂಚೇದ್ರಿಯಗಳ ಎಲ್ಲ ಕಾರ್ಯವನ್ನು ಮಾಡಬಲ್ಲ ಎನ್ನುವ ಭಗವಂತನಲ್ಲಿಯ ಈ ಅಚಿಂತ್ಯಾದ್ಭುತಶಕ್ತಿಯ ಬಗ್ಗೆ ಪುರಂದರದಾಸರು–

**ಕಣಲ್ಲಿ ಕೇಳುವ ಕಾಂಬುವನರಿವ ಆಘ್ರಾಣಿಸುವ ಆಸ್ವಾದಿಸುವ**
**ರಸನದಿ ಕೇಳುವ ಕಾಂಬುವನರಿವ ಆಘ್ರಾಣಿಸುವ ಆಸ್ವಾದಿಸುವ**
**ಸ್ಪರುಶದಿ ಕೇಳುವ ಕಾಂಬುವನರಿವ ಆಘ್ರಾಣಿಸುವ ಆಸ್ವಾದಿಸುವ**
**ಘ್ರಾಣದಿ ಕೇಳುವ ಕಾಂಬುವನರಿವ ಆಘ್ರಾಣಿಸುವ ಆಸ್ವಾದಿಸುವ**
**ಲೋಕ ವಿಲಕ್ಷಣ ದಿವ್ಯಕರಣ ಲೋಕಕಶ್ಯರ್ಯ** [೩೧] **ಎಂದು**
**ಪರಿಚಯಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.**

ಈ ಸ್ವಗತ ಭೇದ ವಿವರ್ಜಿತತ್ವ, ವಿಚಾರವನ್ನೇ "ಒಂದು ದುರ್ಬಲ ಪ್ರಬಲನೀಚೋಚ್ಯವಿಲ್ಲವು! ನಿತ್ಯವ್ಯಕ್ತ ಅಚ್ಯುಬೆಲ್ಲವ ಒಂದು ಆವ ಕಡೆ

**31. ಪು.ಸಾ.ದ. ಭಾಗ–4, ಪು.194.**

ತಿಂದರೂ.. ಒಂದು ಕಡೆ ಹುಳಿ ಸಿಹಿ ಎನಿಪುದೆ[32] ಎಂದು ಸುಂದರ ದೃಷ್ಟಾಂತದ ಮೂಲಕ ಗೋಪಾಲದಾಸರು ಮನವರಿಕೆ ಮಾಡಿಕೊಟ್ಟಿದ್ದಾರೆ. ಸಕ್ಕರೆಗೊಂಬೆಯನ್ನಾಗಲಿ ಅಥವಾ ಬೆಲ್ಲದ ಅಚ್ಚನ್ನಾಗಲಿ ಯಾವಕಡೆ ತಿಂದರೂ ಅದು ಸಿಹಿಯಾಗಿಯೇ ಇರುವಂತೆ ಪರಮಾತ್ಮನ ಎಲ್ಲ ಅವಯವಗಳೂ ಸಂಪೂರ್ಣಜ್ಞಾನಾನಂದಮಯವಾಗಿವೆ. ಎಂಬಲ್ಲಿ ಶಾಸ್ತ್ರೀಯ ಜಟಿಲ ಪ್ರಮೇಯವೂ ಸಹ ಗೋಪಾಲದಾಸರ ಪ್ರತಿಭೆಯಿಂದಾಗಿ ಅನನ್ಯತೆಯನ್ನು ಸಾಧಿಸುತ್ತದೆ.

ಇದರಂತೆ 'ಕರಚರಣ ನಖಕೇಶ ಶಿರಚಕ್ಷು ಶ್ರವಣಾದಿ[33] ಸರ್ವಾವಯಗಳಿಂದ ಸರ್ವರೂಪಗಳಿಂದ ಸಿರಿಯರಸ ಸ್ವಗತಭೇದವಿದೂರ ಎಂಬ ಇದೇ ವಿಚಾರದ ಪ್ರಸನ್ನವೆಂಕಟರ ಮಾತಿನಲ್ಲೂ 'ನೇಹ ನಾನಾಸ್ತಿ ಕಿಂಚನ' 'ನ ಸ್ಥಾನತೋಽ ಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ' ಸರ್ವರೂಪೇಷ್ವ ಭೇದವಾನ್ 'ನಿರ್ದೋಷ ಪೂರ್ಣಗುಣ ವಿಗ್ರಹ... ಸ್ವಗತ ಭೇದ ವಿವರ್ಜಿತಾತ್ಮಾ' ಎಂದು ಮುಂತಾಗಿ ಕಾಠಕೋಪನಿಷತ್, ಬ್ರಹ್ಮಸೂತ್ರ ಅಣುಭಾಷ್ಯ , ಮಹಾಭಾರತತಾತ್ಪರ್ಯನಿರ್ಣಯ ಮುಂತಾದವುಗಳ ಮಾತುಗಳ ಸಂಗ್ರಹವನ್ನು ಕಾಣಬಹುದಾಗಿದೆ.

ಹೀಗೆ ಪರಮಾತ್ಮನ ಎಲ್ಲ ಅವಯವಗಳೂ ಜ್ಞಾನಾನಂದಾದಿ ಪರಿಪೂರ್ಣವಾಗಿದ್ದು ಯಾವುದೇ ತರಹದ ತಾರತಮ್ಯಕ್ಕೆ ಅವಕಾಶವಿಲ್ಲದ್ದರಿಂದಲೇ ಜಗನ್ನಾಥದಾಸರು 'ಪರಮಾತ್ಮನು ಸ್ವಗತಭೇದ ವಿವರ್ಜಿತನು। ಸರ್ವಗ ಸದಾನಂದೈಕ ದೇಹನು[34] ಎಂದಿರುವುದು ಸ್ಮರಣಾರ್ಹವಾಗಿದೆ.

ಇದರಂತೆ ಅನಂತ ಅವತಾರನೆನಿಸಿದ ಪರಮಾತ್ಮನ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ ಭಾರ್ಗವ, ರಾಮ, ಕೃಷ್ಣ, ಬುದ್ಧ, ಕಲ್ಕಿ ಎಂಬ

32. ಗೋಪಾಲವಿಠ್ಠಲ ಸುಳಾದಿಗಳು, ಪು.213.

33. ಹ.ಕ.ಸಾ. 2-8,

34. ಪು.ಸಾ.ದ. ಭಾಗ-4, ಪು.205.

ಪ್ರಸಿದ್ಧ ದಶಾವತಾರಗಳಾಗಲಿ ಅಥವಾ ವ್ಯಾಸ, ಕಪಿಲ, ಹಯಾಸ್ಯ, ಧನ್ವಂತ್ರಿ, ಋಷಭ, ಮಹೀದಾಸ, ದತ್ತಾತ್ರೇಯಾದ್ಯಮಿತ ಇತರ ಅವತಾರಗಳಾಗಲೀ ಎಲ್ಲವೂ ಜ್ಞಾನಾನಂದ ಸಾಮರ್ಥ್ಯಾದಿ ಗುಣ ಪರಿಪೂರ್ಣವಾಗಿವೆ ಒಂದೊಂದವತಾರದೊಳನಂತ ಮಹಿಮೆ, ಒಂದೊಂದವಯದೊನಂತ ವ್ಯಾಪಾರ ಅವನು ಆವಾವ ಕಾಲದಲ್ಲಿ ಆವಾವ ದೇಶದಲ್ಲಿ ಆವಾವ ಜೀವರಲಿ ಶ್ರೀವಲ್ಲಭ ಪರಿಪೂರ್ಣ ಭೂವಲ್ಲಭ ಪರಿಪೂರ್ಣ ಸಕಲ ಲೋಕದೊಳಗೊಬ್ಬ...... ಪೂರ್ಣ[35]ನಾಗಿದ್ದಾನೆ. ಹೀಗೆ ಪರಮಾತ್ಮನ ಎಲ್ಲ ರೂಪಗಳು ಎಲ್ಲ ದೇಶ, ಕಾಲ ಹಾಗೂ ಅವತಾರಗಳಲ್ಲಿ ಪರಿಪೂರ್ಣವಾಗಿವೆ ಎಂಬುದನ್ನು ದಾಸರು ಮನಗಾಣಿಸಿ ಕೊಟ್ಟಿದ್ದಾರೆ.

'ಪರಮಾತ್ಮನು ಸರ್ವವ್ಯಾಪ್ತ' ಎಂಬುದನ್ನು ಎಷ್ಟು ವರ್ಣಿಸಿದರೂ ಹರಿದಾಸರಿಗೆ ದಣಿವೆಂಬುದೇ ಇಲ್ಲ. ಅಣುರೇಣು ತೃಣಕಾಷ್ಠ ಪರಿಪೂರ್ಣ ಗೋವಿಂದ ಎಂಬ ಪುರಂದರದಾಸರ ಮಾತಿನಂತೆ 'ನಿನ್ನೊಳು ನೀನೆ, ಎನ್ನೊಳು ನೀನೆ ಅನರೊಳು ನೀನೆ ಎಂಬ ವಿಜಯದಾಸರ ಮಾತಿಗೂ ಸಹ ಹೆಚ್ಚಿನ ವಿವರಣೆ ಬೇಕಿಲ್ಲ. "ಎಪ್ಪತ್ತೆರಡು ಸಾವಿರ ದಂಡು ಜಪ್ಪಿಸಿ ಕುಳಿತೈತೆ। ಇಪ್ಪತ್ತ ನಾಲಕು ತತ್ವದ ಧಣಿ ಅಪ್ಪಣೆ ಮ್ಯಾಲೈತೆ"[36] ಎಂಬ ಲಾವಣಿ ಪದದಲ್ಲಿಯೂ ಸಹ ಎಪ್ಪತ್ತೆರಡು ಸಾವಿರ ನಾಡಿಗಳಿರುವ ಈ ದೇಹದಲ್ಲಿ ಶ್ರೀಹರಿಯ ಸರ್ವವ್ಯಾಪ್ತತ್ವವು ದಾಸರಿಂದ ಪ್ರತಿಪಾದಿತವಾಗಿದೆ. ಹರಿಸರ್ವೋತ್ತಮತ್ವ ಸಾಧಿಸುವಲ್ಲಿ "ಸರ್ವವ್ಯಾಪ್ತತ್ವ"ವೂ ಒಂದು ಪ್ರಮುಖ ಕಾರಣವಾಗಿರುವುದರಿಂದ ಎಲ್ಲ ಹರಿದಾಸರಲ್ಲಿ ಇದು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಅಣುರೇಣು ದೋಳೀತ ಅನುಕೂಲವಾದಾತ। ಆನಂದೋ ಬ್ರಹ್ಮ ಅನಂತನೀತ ಮಹಾಮಹಿಮನಹುದೀತ ಬಾಹ್ಯಾಂತ್ರ ಪೂರಿತ[37] ಎಂಬ ಮಹಿಪತಿರಾಯರ ಮಾತುಗಳಲ್ಲಿ ಪರಮಾತ್ಮನ ಸರ್ವವ್ಯಾಪ್ತತ್ವವನ್ನು

---

**35. ಅದೇ ಪು. 186.**

**36. ಹರಿದಾಸ ಝೇಂಕಾರ ತರಂಗಣಿ, ಪು.246.**

**37.**

ವರ್ಣಿಸುವ 'ಅಂತರ್ಬಹಿಶ್ಯ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಎಂಬ ನಾರಾಯಣೋಪನಿಷತ್ತು ಪ್ರತಿಧ್ವನಿಗೈಯುತ್ತಿರುವುದನ್ನು ಆಲಿಸಬಹುದು. ಪರಮಾತ್ಮನ ಸರ್ವವ್ಯಾಪ್ತತ್ವವನ್ನು ವರ್ಣಿಸುವ. ಎಲ್ಲ ದಾಸರ ಕೃತಿಗಳಲ್ಲೂ ಸುಳಿಯುವ ಈ ವೇದವಾಣಿಯನ್ನು ಮಹಿಪತಿರಾಯರು "ಬಾಹ್ಯಾಂತ್ರ ಪೂರಿತ" ಎಂದು ಅನುಕರಿಸಿದ ರೀತಿಯೂ ಗಮನಾರ್ಹ.

ದ್ವೈತದರ್ಶನವು ಪರಮಾತ್ಮನು ವಿಶ್ವವ್ಯಾಪಕನೆಂಬುದನ್ನು ವಿವರಿಸಲು "ಸಹಸ್ರಶೀರ್ಷಾ ಪುರುಷಃ" 'ವಿಶ್ವತಶ್ಚಕ್ಷುಃ' ಮುಂತಾದ ಅನೇಕ ವೇದಮಂತ್ರಗಳ ಆಧಾರ ನೀಡಿದೆ. ವಿಶ್ವತಶ್ಚಕ್ಷುಃ ಎಂಬ ಈ ಮಂತ್ರ ದಾಸರಿಗೆ ಅತ್ಯಂತ ಪ್ರಿಯವಾಗಿದೆ ಎನ್ನುವುದಕ್ಕೆ ಇದನ್ನು ಯಥಾವತ್ತಾಗಿ ಅನುಕರಿಸಿದ, ಅನುವಾದಿಸಿದ, ಅನುಸರಿಸಿದ ದಾಸರ ಹೇರಳ ಕೃತಿಗಳೆ ನಿದರ್ಶನ.

**ವಿಶ್ವತೋಮುಖ ನೀನೆ ವಿಶ್ವತಶ್ಚಕ್ಷು ನೀನೆ**
**ವಿಶ್ವತೊ ಬಾಹು ವಿಶ್ವಪಾದನು ನೀನೆ**
**ವಿಶ್ವ ಉದರ ನೀನೆ ವಿಶ್ವವ್ಯಾಪಕ ನೀನೆ**
**ವಿಶ್ವನಾಟಕ ಸೂತ್ರಧಾರಿಯೆ ವಿಷ್ಣುವೆ**[೩೮]

ಎಂಬವೇ ಮುಂತಾದ ಪುರಂದರದಾಸರು, ಗೋಪಾಲದಾಸರು ಮುಂತಾದವರ ಕೃತಿಗಳೇ ಸಾಕ್ಷಿ "ಎಲ್ಲರೊಳು ತಾನಿಪ್ಪ ತನ್ನೊಳ। ಗೆಲ್ಲರನು ದರಿಸಿಹನು....... ಸೊಲ್ಲ ಲಾಲಿಸಿ ಸ್ತಂಭದಿಂದಲಿ ಬಂದ[39] ಎಂದು ಇದೇ ಸರ್ವವ್ಯಾಪ್ತತ್ವವನ್ನು ವಿವರಿಸಿದ ಜಗನ್ನಾಥದಾಸರೂ ಸಹ "ಪರಮಾತ್ಮನು ಎಲ್ಲರಲಿ ತಾನಿದ್ದು ತನ್ನಲಿ ಎಲ್ಲರನ್ನು ಧರಿಸಿದ್ದಾನೆ" ಎಂಬ ಈಶಾವಾಸ್ಯೋಪನಿಷತ್ ಹಾಗೂ ಭಗವದ್ಗೀತೆ[40] ಮುಂತಾದವುಗಳ ವಿಚಾರವನ್ನು ಅನುವಾದಿಸಿದ್ದಾರೆ.

---

**38.** ಮಹಿಪತಿರಾಯರ ಕೃತಿಗಳು ಸಂ. ವರದರಾಜರಾವ್.

**39.** ಪು.ಸಾ.ದ. ಭಾಗ-2, ಪು.5.

**40.** ಹ. ಕ. ಸಾ. ವ್ಯಾಪ್ತಿ, ಪು.27.

"ಸರ್ವೋತ್ತಮತ್ವ"ವನ್ನು ಸಮರ್ಥಿಸುವ ಸರ್ವಗುಣಪರಿಪೂರ್ಣತ್ವಕ್ಕೆ ಸರ್ವಕರ್ತೃತ್ವವೂ ಒಂದು ಪ್ರಮುಖ ಪೂರಕ ಅಂಶವಾಗಿದೆ. ಪ್ರಪಂಚಕ್ಕೆ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಇವೆಲ್ಲವೂ ಭಗವಂತನಿಂದಲೇ ಉಂಟಾಗುತ್ತವೆ. ಎಂದಿದೆ ದ್ವೈತ ದರ್ಶನ, ವಿಷ್ಣುವೇ ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ ಹಾಗೂ ವಾಸುದೇವ ರೂಪಗಳಿಂದ ಜಗತ್ತಿಗೆ ಕ್ರಮವಾಗಿ ಸೃಷ್ಟಿ, ರಕ್ಷಣ, ಸಂಹಾರ ಹಾಗೂ ಮುಕ್ತಿಗಳನ್ನು ಒದಗಿಸುತ್ತಾನೆ ಎಂಬ ಮಧ್ವರ ವಿಚಾರವನ್ನು[41]

ಸೃಷ್ಟಿ ಸ್ಥಿತಿ ಲಯ ನಿಯಮ ಜ್ಞಾನಾಜ್ಞಾನ ಬಂಧಮೋಕ್ಷಾದ್ಯಷ್ಟ ಕಾರಣ ಸದಾ ಸಾಧು ಪಕ್ಷ[42] ಎಂದು ಸಂಗ್ರಹಿಸಿರುವ ಪ್ರಸನ್ನ ವೆಂಕಟರಂತೆ, ಪ್ರದ್ಯುಮ್ನ ನೆನಿಸಿ ಲೋಕವನಾದಿಯಲಿ ಸೃಜಿಸುವೆ ದೇವ। ಅನಿರುದ್ಧ ನೆನಿಸಿ ಲೋಕವ ನನವರತ ಪಾಲಿಸುವೆ ದೇವ। ಸಂಕರುಷಣನೆನಿಸಿ ಲೋಕವ ನಿನ್ನೊಳಗಿಡುವೆ। ವಾಸುದೇವ ನೆನಿಸಿ ಕೈವಲ್ಯವನೀವೆ।[43] ಎಂದು ಪ್ರಸ್ತಾಪಿಸಿದ ಪುರಂದರದಾಸರೇ  ಬ್ರಹ್ಮ, ವಿಷ್ಣು, ಮಹೇಶ್ವರ ಈ ತ್ರಿಮೂರ್ತಿಗಳು ಸೃಷ್ಟಿ, ಸ್ಥಿತಿ, ಸಂಹಾರ ಕರ್ತೃಗಳು ಎಂಬ ಲೋಕ ಪ್ರಸಿದ್ಧಿಯನ್ನು ನಿನ್ನ ಬೊಮ್ಮ ಮೂರುತಿಗೆ ನಮೋ ನಮೋ । ನಿನ್ನ ರುದ್ರ ಮೂರುತಿಗೆ ನಮೊ ನಮೋ ಎಂದು ಸಮನ್ವಯಗೊಳಿಸಿದ ರೀತಿಯೂ ಸಹ ಅಷ್ಟೇ ಯುಕ್ತಿ ಪೂರ್ಣವಾಗಿದೆ. ಪ್ರಪಂಚದ ಸೃಷ್ಟಿ, ಸ್ಥಿತಿ, ಸಂಹಾರಾಧಿಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಸಮರ್ಥನಾದ ವಿಷ್ಣುವು ಬ್ರಹ್ಮ ರುದ್ರಾದಿಗಳಿಗೂ ಮಹತ್ವ ನೀಡುವುದಕ್ಕಾಗಿ ಅವರಲ್ಲಿ ಒಂದೊಂದು ರೂಪದಿಂದ ನಿಂದು ಸೃಷ್ಟ್ಯಾದಿ ಕಾರ್ಯಗಳನ್ನು ನಡೆಸುತ್ತಾನೆ ಎಂಬ ದ್ವೈತದರ್ಶನದ ಸಮಸ್ವಯ ದೃಷ್ಟಿಗೆ ಭಾಗವತಾದಿಗಳು ಬೆಂಬಲವಾಗಿ ನಿಂತಿವೆ[44] ಪರಮಾತ್ಮನು ಬ್ರಹ್ಮನಲ್ಲಿ ಬ್ರಹ್ಮರೂಪಿಯಾಗಿ ಶಿವನಲ್ಲಿ

---

41. ಯಸ್ತು ಸರ್ವಾಣಿ ಭೂತಾನಿ, ಸರ್ವಭೂತಸ್ಥಮಾತ್ಮಾನಂ, 6–29.

42. ಮ. ಭಾ. ತಾ. ನಿ. ಭಾಗ–1, 7.

43. ಸಮಗ್ರ ದಾಸಸಾಹಿತ್ಯ ಸಂ.8, ಪು.158.

44. ಬ್ರಹ್ಮಣ ಬ್ರಹ್ಮರೂಪೋಸೌ.

ಶಿವರೂಪಿಯಾಗಿ ನಿಂದು ಸೃಷ್ಟ್ಯಾದಿ ಕಾರ್ಯಗಳನ್ನು ನಿರ್ವಹಿಸುವನೆಂಬುವ ದ್ವೈತ ಸಿದ್ಧಾಂತದ ಈ ತತ್ವ ಅನೇಕ ಹರಿದಾಸರನ್ನು ಆಕರ್ಷಿಸಿದೆ. ಎನ್ನುವುದಕ್ಕೆ ಬೊಮ್ಮನೊಳಗೆ ಬೊಮ್ಮ ಶಿವನೊಳಗೆ ಶಿವರೂಪ ಅಮ್ಮಮ್ಮ ವ್ಯಾಪಾರಗಳ ಮಾಡುವೆ[45] ಎಂದು ಮುಂತಾಗಿ ಇದೇ ವಿಚಾರದ ಅನುವಾದ, ಅನುಕರಣೆ, ನಿರೂಪಣೆ, ವಿವರಣೆ ಮುಂತಾದ ರೂಪದಲ್ಲಿಯ ವಿವಿಧ ಹರಿದಾಸರಲ್ಲಿಯ ಅನೇಕ ಕೃತಿಗಳೇ ನಿದರ್ಶನ.

ದ್ವೈತಸಿದ್ಧಾಂತದ ವಿವಿಧ ತತ್ವಸೂಕ್ಷ್ಮಗಳು ಹರಿದಾಸರಲ್ಲಿ ಹೃದಯಸ್ಥವಾದಂತೆ ಗ್ರಂಥಸ್ಥವೂ ಆಗಿರುವುದು ಅವರ ಕೃತಿಗಳ ಪರಿಶೀಲನೆಯಿಂದ ವೇದ್ಯವಾಗುತ್ತದೆ. 'ಸಾಕಲ್ಯೇನ ಅಜ್ಞೇಯತ್ವ' ತತ್ವವೂ ಇದಕ್ಕೆ ಹೊರತಾಗಿಲ್ಲ. ಸಿರಿವಿರಿಂಚಾದಿಗಳು ಅರಿಯದಿಹ ಮಹಿಮೆಯನರಿತು ಪಾಡಲು ಜಗದಿ ಆರಿಹರಾರಯ್ಯ ಎಂದು ಈ ತತ್ವವನ್ನು ಪ್ರಸ್ತಾಪಿಸಿದ ಪುರಂದರದಾಸರೇ ಪುರುಷಸೂಕ್ತನೇ ಎಂಬ ತಮ್ಮ ಮತ್ತೊಂದು ಸುಳಾದಿಯಲ್ಲಿ[46] ಅದನ್ನು ಸಮರ್ಥಿಸಿದ ರೀತಿ ಮೆಚ್ಚುವಂತಿದೆ ಎಂಬುದನ್ನು ಮೂರು ಸಾಲುಗಳಿಂದ ಪರಮಾತ್ಮನು ಸರ್ವವೇದ ಪ್ರತಿಪಾದ್ಯ ಮೊದಲಿನ ಸೂಚಿಸುತ್ತ ಮುಂದಿನ ಐದು ಸಾಲುಗಳಿಂದ ಭಾಗಶಃ ಜ್ಞಾನಗೋಚರನಾಗುವ ಪರಮಾತ್ಮ ಸಂಪೂರ್ಣ ಜ್ಞೇಯನಲ್ಲ ಎಂಬುದನ್ನು ವಿವಿಧ ದೇವತೆಗಳಲ್ಲಿಯ ಭಗವಂತನ ಜ್ಞಾನ ತಾರತಮ್ಯ ಪೂರ್ಣವಾದುದು ಎಂಬ ಯುಕ್ತಿಯಿಂದ ವಿವರಿಸಿ ಕೊನೆಯಲ್ಲಿ ಸಕಲ ದೇವತೆಗಳು 'ಬಲ್ಲರರಿಯರೊ ಸಾಕಲ್ಯದಿಂದ' ಎಂಬುದನ್ನು ಪ್ರತಿಪಾದಿಸಿದ್ದಾರೆ. ಶಾಸ್ತ್ರೀಯ ಪರಿಭಾಷೆಯ ಸಾಕಲ್ಯ ಎಂಬ ಶಬ್ದ ಗಮನಾರ್ಹ. ಪುರಂದರದಾಸರಲ್ಲಿ ಆಗಾಗ್ಗೆ ಕಂಡು ಬರುವ ಇಂತಹ ಶಾಸ್ತ್ರೀಯ ಶಬ್ದ ಪ್ರಯೋಗ, ಪರಿಕಲ್ಪನೆ ಮುಂತಾದವು ಮುಂದೆ ದ್ವಿತೀಯ ಘಟ್ಟದ ದಾಸಸಾಹಿತ್ಯವು ಪಡೆದ ಶಾಸ್ತ್ರೀಯ ತಿರುವಿನ ಮುನ್ಸೂಚನೆ ಎನ್ನುವಂತಿದೆ.

---

**45. ಪ್ರಮೇಯ ಸುಳಾದಿ, ಪು.13.**

**46. ಪು.ಸಾ.ದ. ಭಾಗ-4, ಪು.197.**

ಇದರಂತೆ ಆಗಮಕೋಟಿಗಳು ನಿನ್ನರಸಿ ಕಾಣವು ನಿನ್ನಂತವರಿಯೆ ನಿಗಮಾಗಮಕ್ಕಳವೆ[47] ಅನಂತ ನಿಗಮ ನಿಕರಕೆ ನಿಲುಕದ। ಅನಂತಾನಂತ ಗುಣ ಪರಿಪೂರ್ಣಗೆ[48] ಮುಂತಾದ ವಿವಿಧೆಡೆಗಳಲ್ಲಿಯ ಪ್ರಸನ್ನವೆಂಕಟರ ಮಾತುಗಳಂತೆ ಇತರ ಹರಿದಾಸರ ಮಾತುಗಳಲ್ಲೂ ಯತೋವಾಚೋ ನಿವರ್ತಂತೇ। ಅಪ್ರಾಪ್ಯ ಮನಸಾಸಹ ಎಂಬ ತೈತ್ತರಿಯೋಪನಿಷತ್ತಿನ ಚಿಂತನೆಗಳನ್ನು ಕಾಣಬಹುದಾಗಿದೆ. ಜೊತೆಗೆ ಅನಂತ ಗುಣ ಪರಿಪೂರ್ಣಸ್ವಾಮಿ ಜ್ಞಾನಾನಂದ ನಿತ್ಯ ತೇ ನಮೋ ಕರುಣಿ[49] ಎಂದು ಕೊಂಡಾಡಲ್ಪಡುವ ಶ್ರೀಹರಿಯ ಕಾಲಿನ ಹೆಬ್ಬೆರಳಿನ ಉಗುರಿನ ಧೂಳಿನ ಕಣದಲ್ಲಿ ಅಡಗಿರುವ ಅನಂತಗುಣಗಳ ಲೆಕ್ಕಾಚಾರವನ್ನು ಮಹಾ ಬುದ್ಧಿವಂತೆಯಾದ ಮಹಾಲಕ್ಷ್ಮಿಗೂ ಇನ್ನೂ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ ಎಂಬ ನರಮಾಪಿ ಪದಾಂಗುಲೀಲಸನ್ನ ಖಧೂರಾಜದನಂತ ಸದ್ಗುಣಾನ್। ಗಣಯೇತ್ ಗಣಯಂತ್ಯನಾರತಂ ಪರಮಾನ್‌ಕೋಸ್ಯ ಪರೋಗುಣಾನ್‌ವದೇತ್' ಎಂಬ ನಾರಾಯಣ ಪಂಡಿತಾಚಾರ್ಯರ ಮಧ್ವವಿಜಯದ ಮಾತನ್ನು ನಿಜರಾಣಿಗಂಘ್ರಿನ ಖನಿಜವು ತಿಳಿಯದ ಮಹಿಮೆ[50] ಎಂದು ಸಂಗ್ರಹಸಿದ ಪ್ರಸನ್ನವೆಂಕಟರ ಸಂಕ್ಷಿಪ ಶಕ್ತಿ ಮೆಚ್ಚುವಂತಿದೆ. ಇದರಂತೆ ವಿಶ್ವತೈಜಸಪ್ರಾಜ್ಞ ತುರ್ಯಾದಿ ರೂಪಧರನ[51] ಎಂಬಲ್ಲಿ ಮಾಂಡೂಕ್ಯೋಪನಿಷತ್ತಿನ ಸಾರ ಸಂಗ್ರಹವೂ ಕೂಡ ಗಮನಾರ್ಹ.

ಹೀಗೆ ಪರಮಾತ್ಮನು ಅಜ್ಞೇಯ ಎಂದಾಗ ಅವನು ಸಾಕಲ್ಯೇನ ಅಜ್ಞೇಯನಾದರೂ ಭಾಗಶಃ ಅರಿವಿಗೆ ನಿಲುಕ ಬಲ್ಲ. ಹಾಗೆಯೇ ಪರಮಾತ್ಮನು ಅದೃಶ್ಯ ಎಂದಾಗಲೂ ಸಹ ಅವನು ಸ್ವಲ್ಪವೂ ಗೋಚರನೇ ಅಲ್ಲ ಎಂದಾಗಿರದೆ ಜೀವರ ವಿವಿಧ ಯೋಗ್ಯತಾನುಸಾರವಾಗಿ ದೃಶ್ಯನಾಗಿದ್ದಾನೆ ಎಂಬ ದ್ವೈತ

**47. ಸಮಗ್ರ ದಾಸಸಾಹಿತ್ಯ, ಸಂ.8, ಪು.388.**

**48. ಸಮಗ್ರ ದಾಸಸಾಹಿತ್ಯ, ಸಂ.8, ಪು.76.**

**49. ಸಮಗ್ರ ದಾಸಸಾಹಿತ್ಯ, ಸಂ.8, ಪು.152.**

**50. ಸಮಗ್ರ ದಾಸಸಾಹಿತ್ಯ, ಸಂ.8, ಪು.170.**

**51 ಸಮಗ್ರ ದಾಸಸಾಹಿತ್ಯ, ಸಂ.8, ಪು.170.**

ಸಿದ್ಧಾಂತದ ಇಂಥ ಅನೇಕ ಪ್ರಮೇಯ ಸೂಕ್ಷ್ಮಗಳ ಮೇಲೆ ಜಗನ್ನಾಥದಾಸರು ತಮ್ಮ ಹರಿಕಥಾಮೃತಸಾರದಲ್ಲಿ ಬೆಳಕು ಚೆಲ್ಲಿದ್ದಾರೆ. ಇದರಂತೆ ಹರಿಸರ್ವೋತ್ತಮತ್ವಕ್ಕೆ ಪೂರಕವೆನಿಸುವ ಇಂತಹ ಅನೇಕ ವಿಚಾರಗಳು ವಿವಿಧ ಹರಿದಾಸರಲ್ಲಿ ಪ್ರತಿಪಾದಿತವಾಗಿರುವುದನ್ನು ಗುರುತಿಸಬಹುದು.

ಸರ್ವಗುಣ ಪರಿಪೂರ್ಣತ್ವ ಹಾಗೂ ಸರ್ವದೋಷದುರತ್ವ ಇವೆರಡೂ ಸರ್ವೋತ್ತಮತ್ವ ರಥದ ಎರಡು ಗಾಲಿಗಳಿದ್ದಂತೆ ಅಂತೆಯೇ ದ್ವೈತದರ್ಶನದಲ್ಲಿ ಇವರೆಡೂ ಜೊತೆಯಾಗಿಯೇ ಸಾಗುವುದನ್ನು ಕಾಣುತ್ತೇವೆ. ಮಧ್ವದರ್ಶನ ಬೆಳಕಿನಲ್ಲಿಯೇ ಮುನ್ನಡೆದ ಹರಿದಾಸರೂ ಸಹ ಇವೆರಡೂ ತತ್ವಗಳನ್ನು ವಿಶದವಾಗಿಯೇ ಚರ್ಚಿಸಿರುವುದು ಕಂಡುಬರುತ್ತದೆ.

**ವಾಸುದೇವಗೆ ಸ್ವಪ್ನಸುಷುಪ್ತಿಪಿ**
**ಪಾಸೆ ಕ್ಷುದ್ಭಯ ಶೋಕ ಮೋಹಾ**
**ಯಾಸ ವಿಸ್ಮೃತಿ ಮಾತ್ಸರ್ಯ ಮದ ಪುಣ್ಯ ಪಾಪಾದಿ**
**ದೋಷವರ್ಜಿತ**[52]

ಎಂದು ಜಗನ್ನಾಥದಾಸರು ಜೀವರಲ್ಲಿರಬಹುದಾದ ಹಸಿವೆ. ನೀರಡಿಕೆ ಅಜ್ಞಾನ ಬಡತನ ಮುಂತಾದ ಕೆಲವು ಪ್ರಮುಖದೋಷಗಳನ್ನು ಪಟ್ಟಿಮಾಡಿ ಪರಮಾತ್ಮನು ಇಂತಹ ಸಕಲ ದೋಷ ವರ್ಜಿತನೆಂದು ವಿವರಿಸಿದ್ದಾರೆ. ಮಾತ್ರವಲ್ಲ ಮುಕ್ತಜೀವರಲ್ಲಿಯೂ ಹುಟ್ಟು, ಸಾವು, ಚಿಂತೆ, ಸಂತಾಪ, ಅಜ್ಞಾನ, ವಿಪರೀತ ಜ್ಞಾನ, ದುಃಖ, ಬಡತನ, ರೋಗ, ಅಪಮಾನ, ಮೋಹ, ಮದ, ಮಾತ್ಸರ್ಯ ಇವೇ ಮುಂತಾದ ದೋಷಗಳು ಕಾಣದಿದ್ದರೂ ಪರಾಧೀನತೆ, ಅಪೂರ್ಣತೆಯಂತಹ ದೋಷಗಳು ಅವರಲ್ಲೂ ಇದ್ದೇ ಇವೆ. 'ಒಂದೊಂದು ಗುಣಗಳು ಇದ್ದಾವು ಅವರಲ್ಲಿ । ಸಂದಣಿಸಿವೆ ಬಹುದೋಷ। ಇಂತಹ ಕುಂದೆಳ್ಳಷ್ಟಿಲ್ಲದವನೆಂದರೆ ಮುಕುಂದನೊಬ್ಬನೆ ಎಂಬ ಲಕ್ಷ್ಮೀಶೋಭಾನೆಯ ಮಾತಿನಂತೆ ಸಕಲ ದೋಷದೂರನೆಂದರೆ ಶ್ರೀಹರಿಯೊಬ್ಬನೆ. ಸ್ವರೂಪೋತ್ಪತ್ತಿ ಹಾಗೂ ನಾಶ ಇವುಗಳಲ್ಲಿಲ್ಲದಿರುವುದರಿಂದ

52. ಹ. ಕ. ಸಾ. ವ್ಯಾಪ್ತಿ, ಪು.31.

ಜೀವರು ನಿತ್ಯರೆನಿಸಿರುವವರಾದರೂ ಅವರಿಗೆ ದೈಹಿಕವಾದ ವೃದ್ಧಿ ಕ್ಷಯಗಳಿವೆ. ಇಂತಹ ವೃದ್ಧಿಕ್ಷಯಗಳು ಸೇರಿದಂತೆ ಪರಮಾತ್ಮನು ಎಲ್ಲ ತರಹದ ನಾಶ ಹಾಗೂ ದೋಷಗಳನ್ನು ಮೀರಿದವನಾದ್ದರಿಂದ ಅವನು ಪರಮ ನಿತ್ಯನಾಗಿ, ಪರಮ ಚೇತನನಾಗಿ ವರ್ಣಿತನಾಗಿದ್ದಾನೆ.[53] ಇದನು ಪುರಂದರದಾಸರು ನಿತ್ಯಾನಿತ್ಯ ವಸ್ತುಗಳೊಳಗೆಲ್ಲ ನಿತ್ಯ ಸುನಿತ್ಯ[54] ಎಂದಿದ್ದಾರೆ.

ಪರಮಾತ್ಮನು ಸರ್ವವ್ಯಾಪ್ತನಾದುದರಿಂದ ಅವನಲ್ಲಿ ಕೆಟ್ಟ ಪದಾರ್ಥಗಳ ಸಂಪರ್ಕವಿರುವುದಾದರೂ ಆತನಿಗೆ ಅವುಗಳ ದೋಷ ಸಂಬಂಧ ಅನಿವಾರ್ಯವೆನ್ನುವಂತಿಲ್ಲ. ಶುದ್ಧಾ ಶುದ್ಧವಸ್ತುಗಳು ಸೇರಿದಂತೆ ಎಲ್ಲೆಡೆ ಸಂಚರಿಸುವ ಗಾಳಿಗೆ ಅಶುದ್ಧತೆ ಸೋಂಕದಿರುವಂತೆ, ಪರಮಾತ್ಮನಿಗೂ ವಿವಿಧ ವಸ್ತುಗಳ ಪಾಪಲೇಪಾದಿಗಳು ಅಂಟುವುದಿಲ್ಲವೆಂದು ಭಗವದ್ಗೀತೆಯ ಆಧಾರದಿಂದ ಸಮರ್ಥಿಸಿಕೊಳ್ಳುವ ದ್ವೈತಸಿದ್ಧಾಂತದ ಈ ತತ್ವಸೂಕ್ಷ್ಮವನ್ನು ಅಣುರೇಣು ತೃಣಕಾಷ್ಠ ಪರಿಪೂರ್ಣ ಗೋವಿಂದ। ನಿರ್ಮಲಾತ್ಮಕನಾಗಿ ಇರುವುದೆ ಆನಂದ ಎಂದು ಪುರಂದರದಾಸರು ಚುಟುಕಾಗಿ ನೆನಪಿಸಿದ್ದಾರೆ. ಪರಮಾತ್ಮನು ವಿವಿಧ ಪದಾರ್ಥಗಳಲ್ಲಿದ್ದರೂ ಅವನಿಗೆ ಯಾವುದೇ ತರಹದ ಪಾಪ ಲೇಪವಿಲ್ಲ ಎಂಬುದರ ಜೊತೆಗೆ ಪರಮಾತ್ಮನು ಜೀವರೊಳಗಿದ್ದು ವಿವಿಧ ಕರ್ಮಗಳನ್ನು ಆಚರಿಸಿದರೂ ಸಹ ಅವನಿಗೆ ಪಾಪಲೇಪಾದಿಗಳು ಇಲ್ಲವೆಂಬ ಮತ್ತೊಂದು ತತ್ವ ಸೂಕ್ಷ್ಮದ ಕಡೆಗೂ ವಿಜಯದಾಸರು ಗಮನಸೆಳೆದಿದ್ದಾರೆ. ಅಖಿಳಾಂಡ ಕೋಟಿ ಬ್ರಹ್ಮಾಂಡ ನಾಯಕ ಸಕಲ ಜೀವರಂತರಂಗದೊಳಗೆ ವ್ಯಾಪಕನಾಗಿ ಇಪ್ಪನು ಜಲಜ ಜಲದಂತೆ ನೀರಿನ ಜೊತೆಗೆ ಇರುವ ತಾವರೆಗೆ ನೀರೇ ಸೋಂಕದಿರುವಂತೆ ಸರ್ವತ್ರ ವ್ಯಾಪಿಸಿದ್ದರೂ ಶ್ರೀಹರಿಗೆ ಪಾಪಲೇಪಾದಿಗಳು ಅಂಟುವುದಿಲ್ಲವೆಂಬ ಶಾಸ್ತ್ರೀಯ ವಿಚಾರ ಸರಣಿಯ ವಿಜಯದಾಸರ ವಿವರಣೆ ಮನತಟ್ಟುವಂತಿದೆ.

ಪರಮಾತ್ಮನು ಸರ್ವಗುಣ ಪರಿಪೂರ್ಣನೆನ್ನುವುದನ್ನು ವಿವರಿಸುವಾಗ ಅವನು ಸರ್ವವ್ಯಾಪ್ತ ಸರ್ವಭೋಕ್ತ, ಸರ್ವಕರ್ತೃ ಎಂದೆಲ್ಲ ವರ್ಣಿಸಲಾಗಿದೆ.

**53. ನಿತ್ಯೋ ನಿತ್ಯಾನಾಂ ಚೇತನ ಶ್ಚೇತನಾನಾಂ.**

**54. ಪು. ಸಾ. ದ. ಭಾಗ-4, ಪು. 223.**

ಶ್ರೀಹರಿ ಸರ್ವಕರ್ತನಾಗಿದ್ದರಿಂದ ಅವನೇ ಸರ್ವಫಲದಾತೃ ಎನ್ನಿಸುತ್ತಾನೆ. ಒಬ್ಬರಿಗೆ ಒಳ್ಳೆಯ ಫಲ ಮತ್ತೊಬ್ಬರಿಗೆ ಕೆಟ್ಟ ಫಲ ದೊರೆಯುತ್ತದೆ. ಆದ್ದರಿಂದ ಪರಮಾತ್ಮನಲ್ಲಿ ತಲೆದೋರಬಹುದಾದ ಪಕ್ಷಪಾತ ಹಾಗೂ ನಿರ್ದಯತೆ ದೋಷಗಳನ್ನು ತೊಡೆದು ಹಾಕಲು ದ್ವೈತದರ್ಶನ ಬ್ರಹ್ಮಸೂತ್ರದ ಬೆಂಬಲವನ್ನು ಕೋರಿದೆ. ಸ್ವಭಾವತಃ ತ್ರಿವಿಧರೆನಿಸಿದ ಜೀವರು ತಮ್ಮ ಅನಾದಿಯಾದ ಯೋಗ್ಯತಾನುಸಾರವಾಗಿ ಮಾಡಿದ ವಿವಿಧ ಕರ್ಮಗಳಿಗೆ ತಕ್ಕಂತೆ ವಿವಿಧ ಫಲಗಳನ್ನು ಪರಮಾತ್ಮನು ನೀಡುವುದರಿಂದ ಅವನು ಪಕ್ಷಪಾತಿ ಅಥವಾ ನಿರ್ದಯಿ ಎನಿಸಲಾರನು ಎಂದು ವಿಶದಪಡಿಸಿದ ಈ ಸೂಕ್ಷ್ಮ ಪ್ರಮೇಯವೂ ಸಹ ದಾಸರಲ್ಲಿ ಪ್ರತಿಪಾದಿತವಾಗಿದೆ.

ಸಾಸಿವೆ ಬಿತ್ತಿದವರಿಗೆ ಹತ್ತಿ ಬೆಳೆ ಬಂದರೆ ಅದು ವೈಷಮ್ಯ, ಪರಮಾತ್ಮನು ವಿವಿಧ ಯೋಗ್ಯತೆಯ ಚೇತನರು ಎಂತುಪಾಸನೆ ಮಾಳ್ಪರಿಗಂತಂತೆ ಫಲ ವೀವನಾದ್ದರಿಂದ ವೈಷಮ್ಯ, ನೈರ್ಘೃಣ್ಯ, ಈಷನ್ಮಾತ್ರ ಜಗದೀಶಗಿಲ್ಲ ಎಂಬ ಗೋಪಾಲದಾಸರ ವಾದಸರಣಿ ಯುಕ್ತಿ ಪೂರ್ಣವಾಗಿದೆ. ಶಾಸ್ತ್ರೀಯ ವಿಚಾರಧಾರೆಯ ಇವರಲ್ಲಿ ಪರಮಾತ್ಮನ ನಿಷ್ಪಕ್ಷಪಾತವನ್ನು ನಿರೂಪಿಸುವ ಮೂಲ ಬ್ರಹ್ಮಸೂತ್ರದ ವೈಷಮ್ಯ, ನೈರ್ಘೃಣ್ಯ ಪದಗಳ ಅನುಕರಣೆ ಗಮನಾರ್ಹ. ಇದರಂತೆ ಬೇಸಾಯ, ಪರೀಕ್ಷೆ ಮುಂತಾದವುಗಳಲ್ಲಿ ಯೋಗ್ಯತೆಯೊಡನೆ ವಿಶೇಷ ಪರಿಶ್ರಮ ಪಡೆದವರಿಗೆ ಉತ್ತಮ ಫಲಸಿಗುವುದು ನ್ಯಾಯ ಸಮ್ಮತವೆಂಬ ಲೋಕಸಿದ್ಧ ವಿಚಾರವನ್ನು ವಾದವಿಶಾರದರಾದ ವಾದಿರಾಜರು ವಿಶದಪಡಿಸಿದ ರೀತಿಯು ಸ್ವಾರಸ್ಯಪೂರ್ಣವಾಗಿದೆ.

ಹರಿದಾಸರು ಹರಿಸರ್ವೋತ್ತಮತ್ವವನ್ನು ವಿವಿಧ ರೀತಿಯಲ್ಲಿ ಬಣ್ಣಿಸಿರುವುದು ಗೋಚರವಾಗುತ್ತದೆ. 'ಕಾಲು ತೊಳೆದವನೊಬ್ಬ ತೊಳೆಸಿ ಕೊಂಡವನೊಬ್ಬ। ಮೌಳಿಯ ಮೇಲೆ ಜಲವಧರಿಸಿದವನೊಬ್ಬ ಎಂಬ ಹರಿಸರ್ವೋತ್ತಮಸಾರದ ಮಾತಿನಂತೆ, ಪಾದಪೂಜೆ ಮಾಡಿಸಿಕೊಂಡವನೇ ಶ್ರೇಷ್ಠ ಎಂಬ ಲೋಕರೂಢಿಗೆ ಅನುಸಾರವಾಗಿರುವ ವಾದಿರಾಜರು ಕಾಲುತೊಳೆದ ಬ್ರಹ್ಮನಿಗಿಂತ ಹಾಗೂ ಆ ತೊಳೆದ ನೀರನ್ನು ತಲೆಯ

ಮೇಲೆ ಧರಿಸಿದ ಶಿವನಿಗಿಂತ ಶ್ರೀಹರಿಯೇ ಶ್ರೇಷ್ಠ ಎಂದು ಹೇಳಿ ಅವನು ಸರ್ವೋತ್ತಮನೆಂಬುದನ್ನು ಯುಕ್ತಿಯಿಂದ ಮನಗಾಣಿಸಿಕೊಟ್ಟಿದ್ದಾರೆ. ಅದರಂತೆ ವಿಷ್ಣು ಸರ್ವೋತ್ತಮ ವಿಷ್ಣು ಪರದೇವತೆ ವಿಷ್ಣುದಾಸರೆಂಬ ಬಿರುದಿನ ಕೋಲೆ ಎಂದು ಮೋಹನದಾಸರು ಹರಿಸರ್ವೋತ್ತಮತ್ವವನ್ನು ಕೋಲುಹಾಡಿನ ತಂತ್ರದ ಮೂಲಕವೂ ಪ್ರಚುರಪಡಿಸ ಹೊರಟಿರುವುದು ಆಕರ್ಷಕವಾಗಿದೆ. ಹೀಗೆ ಯುಕ್ತಿ ವೇದಾದಿಗಳ ಆಧಾರ ಮುಂತಾದವುಗಳಿಂದ ಸಿದ್ಧವಾದ ಈ ಹರಿ ಸರ್ವೋತ್ತಮತ್ವ ವಿಚಾರವನ್ನು 'ಡಂಗುರವ ಸಾರಿ ಹರಿಯ ಡಿಂಗರಿಗರೆಲ್ಲರು। ಭೂಮಂಡಲಕ್ಕೆ ಪಾಂಡುರಂಗ ವಿಠಲ ಪರದೈವವೆಂದು ಎಂದು ಡಂಗುರ ಪದದ ಮೂಲಕ ಸೂಚಿಸಿ ಅದನ್ನು ಎಲ್ಲೆಡೆ ಪ್ರಸುರಪಡಿಸಲು ಪುರಂದರದಾಸರು ಮನವಿ ಮಾಡಿದ್ದಾರೆ. ಹೀಗೆ ಹರಿದಾಸರು ವಿವಿಧ ರೀತಿಯಿಂದ ಹರಿಸರ್ವೋತ್ತಮತ್ವವನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ.

ಹರಿಯು ಸರ್ವೋತ್ತಮ ಎನ್ನುವಲ್ಲಿ ಅವನು ಸರ್ವವೇದ ಪ್ರತಿಪಾದ್ಯನಾಗಿರುವುದು ಸಹ ಒಂದು ಕಾರಣವಾಗಿದೆ. ಪರಮಾತ್ಮನು ಸರ್ವವರ್ಣ ಪ್ರತಿಪಾದ್ಯನಾದುದುರಿಂದ ಅವನು ಸರ್ವವೇದ ಪ್ರತಿಪಾದ್ಯ ಎನ್ನುವ ದಾಸರ ಈ ಯುಕ್ತಿ ನವೀನವೆನಿಸುತ್ತದೆ. 'ಅ' ಮೊದಲು 'ಕ್ಷ' ಕಾರಾಂತ ಈ ಮಹಾವರ್ಣಗಳೆಲ್ಲ ಸ್ವಾಮಿಯಾದ ವಿಷ್ಣುವಿನ ನಾಮವೆಂದು ತಿಳಿದವಗೆ ಎಂದು ವಿಜಯದಾಸರು ಹಾಗೂ ಏಕೋತ್ತರ ಪಂಚಾಶದ್ವರ್ಣಗ ಳೇಕಾತ್ಮನ ನಾಮಂಗಳಿವು। ಮಾಕಮಲಾಸನ ಮೊದಲಾದಮರರು। ಸಾಕಲ್ಯಾದಿ ಇವನರಿಯರೆಂಬುದೆ ಎಂದು ಜಗನ್ನಾಥದಾಸರೇ ಮುಂತಾದವರು ಪರಮಾತ್ಮನು ಎಲ್ಲ ಅಕ್ಷರಗಳಿಂದ ಪ್ರತಿಪಾದ್ಯನಾದ್ದರಿಂದ ಅವನು ಸರ್ವಶಬ್ದ ವಾಚ್ಯನಾಗಿದ್ದಾನೆ ಎಂದಿದ್ದಾರೆ. ಅಂತೆಯೇ ಅವನು ಸರ್ವೋತ್ತಮ ಎಂದು ಸಮರ್ಥಿಸಲಾಗಿದೆ.

ಶ್ರೀಹರಿ ಸರ್ವೋತ್ತಮ ಎಂಬುದು ಸಾಧಿತವಾಯಿತೆಂದರೆ ಜೀವರಾಶಿ ಶ್ರೀಹರಿಯ ಅಧೀನ ಎನ್ನುವುದು ಸಿದ್ಧವಾದಂತೆಯೆ ಜೀವರಾಶಿ ಶ್ರೀಹರಿಯ

ಅಧೀನ ಎಂಬ ವಿಚಾರವನ್ನು ವಾದವೈಕರಿಯಿಂದ ತಾರ್ಕಿಕ ಶೈಲಿಯಿಂದ ದಾಸರು ಮನದಟ್ಟಾಗಿಸಿದ್ದಾರೆ. ನಾನೆ ಸರ್ವದಾ ಸ್ವತಂತ್ರದವನಾದರೆ ಹೀನವಾದ ಜನುಮ ಧರಿಸಿ ಬಂದು ಶ್ವಾನಸೂಕರ ಗಾರ್ಧಭ ಗೃಧ್ರಜಂಬೂಕ ಮಿಕ್ಕನಾನಾ। ಯೋನಿಯೊಳಗೆ ಬಂದು ದುಃಖಿಪೆನೆ। ಹಾನಿವೃದ್ಧಿಯು ಬಳಲಿ ಬೆಂಡಾಗಿ ನಿತ್ಯ ನೆಲೆಗಾಣದೆ ಅಳಲುವೆನೆ। ಎಂಬ ವಿಜಯದಾಸರಂತೆ...... ಜೀವರಿಗಾನು ಶಕ್ತಿಯ ಕೊಟ್ಟರುಂಟಿಲ್ಲದೊಡೆ ಜಡಕೆ ಸಮ। ಕಾಣುಕುಂಟನ ಕಾಣುಕಿವುಡನ। ಕಾಣು ಕಾಣನ ಶಕ್ತಿಯಿದ್ದರೆ ಹೇನವಾದಂಗಗಳ ಭಂಗವನೇಕೆ ಬಿಡಿಸಿಕೊಳ ಎಂಬ ವಾದ ವಿಶಾರದರೆನಿಸಿದ್ದ ವಾದಿರಾಜರು ಮುಂತಾದವರ ಇಂತಹ ಮಾತುಗಳೇ ನಿದರ್ಶನ ಜೀವನೇ ಸರ್ವವಿಧದಿಂದ ಸ್ವತಂತ್ರನಾಗಿದ್ದಲ್ಲಿ ಅನಪೇಕ್ಷಿತವಾದ ಹೀನ ಜನುಮಗಳಾಗಲೀ ರೋಗಾದಿಗಳಾಗಲೀ ಕುರುಡುತನ ಮುಂತಾದ ವಿಕಲಾಂಗತೆಯಾಗಲಿ ಇವೇ ಮೊದಲಾದವುಗಳಿಂದ ಮುಕ್ತನಾಗಲು ಅವನಿಗೆ ಏಕೆ ಸಾಧ್ಯವಾಗಿಲ್ಲ ಎಂಬ ತಾರ್ಕಿಕಯುಕ್ತಿ ಎಂಥವರನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ದಾಸರಲ್ಲಿಯ ಈ ವಾದ ಸರಣಿಗೆ ಮಧ್ವರ ವಾಣಿಯೇ ಪ್ರೇರಣೆಯಾಗಿದೆ. ಇದೇ ವಿಚಾರವನ್ನು-

**ನಿನ್ನಾಧಿನ ಎನ್ನ ತನುಮನ**
**ನಿನ್ನಾಧೀನ ಎನ್ನ ಧನಧಾನ್ಯ**
**ಎನ್ನ ವಸ್ತು ವಾಹನ ನಿನ್ನಾಧೀನ**
**ಎನ್ನ ಪುತ್ರ ಮಿತ್ರ ಕಳತ್ರರು ನಿನ್ನಾಧೀನ**
**ಎನ್ನ ಅನ್ನೋದಕ ನಿನ್ನಾಧೀನ**
**ಎನ್ನ ಅಧೀನ ಆವುದು ಉಂಟು ನೀನೇ ನೋಡು**

ಎಂದು ನೇರವಾಗಿಯೂ ವಿವರಿಸಿದ ಪುರಂದರ ದಾಸರಂತೆ ಜೀವರಾಶಿ ಶ್ರೀಹರಿಯ ಅಧೀನ ಎಂಬ ವಿಚಾರಕ್ಕೆ 'ನಿನ್ನಾಧೀನ ಸಕಲ ಚೇತನವು ನಿನ್ನಾಧೀನ ಚರಾಚರವೆಂದು ಶ್ರುತಿ ಸಾರುತಿದೆ ಎಂದು ಶ್ರೀಪಾದರಾಜರು ಹಾಗೂ '.........ಪ್ರಸನ್ನ ವೆಂಕಟೇಶನ್ನ। ಅನುಜ್ಞದಿಂದಾಧಾರದಿಂದಿಹರಾಗಿ ಶರೀರದಿ

ತೃಣಮಾತ್ರ ಚಲನೆ ಶಕುತಿಯಾರಿಗೆ ಇಲ್ಲಾದ್ಯಂತ[55] ಎಂದು 'ತೇನವಿನಾತೃಣಮಪಿ ನ ಚಲತಿ' ಎಂಬ ಪ್ರಸಿದ್ಧೋಕ್ತಿಯನ್ನು ನೆನಪಿಸಿರುವ ಪ್ರಸನ್ನವೆಂಕಟರೂ ಈಶಾವಾಸ್ಯಮಿದಂ ಸರ್ವಂ ಎಂಬ ಈಶಾವಾಸ್ಯೋಪನಿಷತ್ತಿನ ಮಾತನ್ನು ತಮ್ಮ ವಿಚಾರಗಳಿಗೆ ಆಧಾರವಾಗಿ ನೀಡಿರುವುದು ಸ್ಮರಣಾರ್ಹವಾಗಿದೆ.

ಇದರಂತೆ ಹರಿಸರ್ವೋತ್ತಮತ್ವಕ್ಕೆ ಪೂರಕವಾದ ಚೇತನ ತಾರತಮ್ಯವನ್ನು ದಾಸರು ವಿವರಿಸಿದ್ದಾರೆ. ಗೋಪಾಲದಾಸರು ಹರಿಕರ್ತೃತ್ವ ತಿಳಿದು ತಾರತಮ್ಯ ಪಂಚಭೇದ ಅರಿದವರಿಗೆ ಒಲಿವ ಎಂದಿದ್ದಾರೆ. ವರ ತಾರತಮ್ಯ ಪಂಚಭೇದ ಸತ್ಯವೆಂದು ಸತ್ಯವೆಂದು ನೆರೆಪೇಳುವ ವಾಯು ಮತದ ಸುಜ್ಞಾನವನು ಜನುಮ ಜನುಮದಲ್ಲಿ ಕೊಡು ಎಂದು ವ್ಯಾಸರಾಜರು ಬೇಡಿಕೊಂಡಿದ್ದಾ-ರೆ. ಮಾತ್ರವಲ್ಲ ಪರಲೋಕ ಸಾಧನಕೆ ತಾರತಮ್ಯ ಮತವೆಂದು ಗರಳವನ್ನು ಕುಡಿಯಲೆ ಎಂದು ವಾದಿರಾಜರೇ ಮುಂತಾದವರು ತಾರತಮ್ಯ ಮತವೇ ಶ್ರೇಷ್ಠವೆಂದು ಸಾಧಿಸಲು ಭೀಕರ ಪ್ರತಿಜ್ಞೆಗೂ ಸಿದ್ಧರಾಗಿರುವುದನ್ನು ಕಂಡಾಗ ಹರಿದಾಸರಲ್ಲಿಯ ತತ್ವನಿಷ್ಠೆ, ಸಿದ್ಧಾಂತ ದೀಕ್ಷೆ ಮುಂತಾದವುಗಳು ವ್ಯಕ್ತವಾಗುತ್ತವೆ.

ತ್ರಿವಿಧ ಜೀವರು ಉಂಟು ತ್ರಿವಿಧ ಕರ್ಮಗಳುಂಟು ಎಂದು ಪ್ರಸ್ತಾಪಿಸಿದ ಗೋಪಾಲದಾಸರು ಮುಂದುವರೆದು ತ್ರಿವಿಧ ಗುಣಗಳುಂಟು ತ್ರಿವಿಧ ಕಾರ್ಯಗಳುಂಟು। ತ್ರಿವಿಧರೊಳೊಂದೊಂದು ತ್ರಿವಿಧ ಬಗೆಯುಂಟು। ತ್ರಿವಿಧ ಜೀವರ ಕಾರ್ಯ ಶ್ರೀಹರಿಯ ಅಧೀನ। ತ್ರಿವಿಧರಿಂದಲ್ಲಿ ಭಿನ್ನ ತ್ರಿವಿಧರ ಪಾಲಕ ಎಂದು ತಾರತಮ್ಯತತ್ವವನ್ನು ವಿವರಿಸಿದ್ದಾರೆ. ನರೋತ್ತ ಮಗಧಿಕ ಗಂಧರ್ವರಿಗಧಿಕ। ಸುರೇಂದ್ರಗಧಿಕ ಹರಗಧಿಕ। ವಿರಿಂಚಿಗಧಿಕ ಸಿರಿಗಧಿಕ। ಹರಿಸರ್ವೋತ್ತಮ ಎಂಬ ಶ್ರೀಪಾದರಾಜರ ಮಾತು 'ಆರೋಹಣ ತಾರತಮ್ಯ'ದ ನಿರೂಪಣೆಯಾಗಿದೆ. ಹರಿಯೇ ಸರ್ವೋತ್ತಮ ಸಿರಿಯು ಆತನ ರಾಣಿ। ಸರಸಿ ಜೋದ್ಭವ ಮಾರುತ ಪುತ್ರರಯ್ಯ। ಸರಸ್ವತಿ ಭಾರತಿ ಗರುಡ ಶೇಷ ರುದ್ರ। ಹರಿಯ ರಾಣಿಯರು ನಾಲ್ಕೆರಡು ಮಂದಿ ಸೌ। ಪರಣಿ ವಾರುಣಿ

55. ಸಮಗ್ರ ದಾಸಸಾಹಿತ್ಯ, ಸಂ.8, ಪು.55.

ಗಿರಿಜಾ ಸುರಪತಿ ಕಾಮಾದ್ಯರ। ತಾರತಮ್ಯ ಜ್ಞಾನದಿಂದ ತಿಳಿಯಬೇಕು ಎಂದು ಮುಂತಾಗಿ ಮೋಹನದಾಸರು ಅವರೋಹಣ ತಾರತಮ್ಯವನ್ನು ವಿಶದ ಪಡಿಸಿದ್ದಾರೆ. ಈ ಅವರೋಹಣ ಇದರಂತೆ–

**ಲಕುಮಿ ಹರಿಯರಸಿ ನಾಲಕು ಮುಖನೆ ಮಗ ವಾಣಿ**
**ಭಕುತಿಗಭಿಮಾನಿ ಪಾರ್ವತಿ ಸೊಸೆಯರು**
**ಮುಖಸಹಸ್ರನು ಖಗಪ ಮುಖ ಪಂಚಪೌತ್ರಶತ**
**ಮುಖನೃಪ್ತ(?) ಪಂಚಸಾಯಕನಣುಸುತ**
**ಸಕಲ ಸುರಋಷಿ ವೈಷ್ಣವನಿಕರವೆಲ್ಲವು ಭೃತ್ಯ**
**ಮುಕುತ ಜನರಲ್ಲಿ ತರತಮ ಭಾವವಯ**[56]

ಎಂದು ಪ್ರಸನ್ನವೆಂಕಟರಲ್ಲೂ ಅವರೋಹಣ ತಾರತಮ್ಯ ನಿರೂಪಣೆಯ ಉಗಾಭೋಗವು ಕಂಡು ಬರುತ್ತದೆ. ಇಲ್ಲಿ ಎರಡನೆಯ ಸಾಲಿನಲ್ಲಿ ಭಕುತಿಗಭಿಮಾನಿ ಭಾರತಿ ಎಂದಾಗಬೇಕು ಪಾರ್ವತಿ ಎಂದಲ್ಲ ಭಾರತಿ ಭಕುತಿಯನು ಕೊಡುವುದು ಮಾರುತಸತಿನೀನು ಎಂದಂತೆ ಭಕ್ತಿಯ ಅಭಿಮಾನಿ ವಾಯುಪತ್ನಿಯಾದ ಭಾರತಿದೇವಿ ಮಾತ್ರವಲ್ಲ ಶ್ರೀಹರಿಯ ಸೊಸೆಯರಲ್ಲಿ ಸರಸ್ವತಿ ಭಾರತಿಯರು ಸೇರ್ಪಡೆಗೊಳ್ಳುವರೇ ವಿನಹ ಪಾರ್ವತಿಯಲ್ಲ, ಮೇಲಾಗಿ ಮುಖಸಹಸ್ರನು ಖಗಪ ಎಂದು ಮುಂತಾಗಿ ಶೇಷ–ಗರುಡರನ್ನು ಮುಂದೆ ಹೇಳಲಿರುವುದರಿಂದ ತಾರತಮ್ಯ ಕಕ್ಷೆಯಲ್ಲಿ ಶೇಷ–ಗರುಡರಿಗಿಂತ ಉನ್ನತ ಸ್ಥಾನ ಭಾರತಿದೇವಿಯದು. ಜೊತೆಗೆ ಪಾರ್ವತಿಯ ಸ್ಥಾನ ಗರುಡ–ಶೇಷ–ರುದ್ರರ ನಂತರ ಪ್ರಸ್ತುತವಾಗುತ್ತದೆ. ಈ ಎಲ್ಲ ಕಾರಣಗಳಿಂದ ಇಲ್ಲಿ ಪಾರ್ವತಿಯ ಬದಲಾಗಿ ಭಾರತಿ ಎಂಬ ಪಾಠ ಇರಬೇಕಾದುದೇ ಸೂಕ್ತ ಮುದ್ರಣ ಅಥವಾ ಲಿಪಿಕಾರರ ದೋಷದಿಂದ ವ್ಯತ್ಯಾಸವಾಗಿರುವ ಸಾಧ್ಯತೆಯೂ ಇಲ್ಲದಿಲ್ಲ.

ಇದರಂತೆ ಮೂರು ಮತ್ತು ನಾಲ್ಕನೆಯ ಸಾಲುಗಳಲ್ಲಿ ಶತಮುಖ ನಪ್ತೃ ಎಂದು ಆಗಬೇಕು ಮಖ ಎಂದರೆ ಯಾಗ ಶತಮಖ ಎಂದರೆ

---

**56**. ಸಮಗ್ರ ದಾಸಸಾಹಿತ್ಯ, ಸಂ.8, ಪು.407.

ನೂರು ಅಶ್ವಮೇಧಯಾಗ ಮಾಡಿದ ಇಂದ್ರ ಎಂದರ್ಥ. ಮುಖ ಎಂದಿಟ್ಟು ಕೊಂಡರೆ ತಾರತಮ್ಯ ವಿವರಣೆ ಸಂದರ್ಭದಲ್ಲಿ ಇಂದ್ರರನ ಪ್ರಸಕ್ತಿಯು ಬರುವುದಿಲ್ಲ ಮಾತ್ರವಲ್ಲ ಮುಖ ಎಂಬುದು ಅರ್ಥಹೀನವೆನಿಸುತ್ತದೆ. 'ನಪ್ತ್ರ' ಎಂದರೆ ಮರಿಮಗ ಎಂದರ್ಥ. ಇದು ತಿಳಿಯದೆ ಅಲ್ಲಿ 'ನೃಪ್ತ್ರ' (?) ಎಂದೆಲ್ಲ ಬರೆದು ಪ್ರಶ್ನೆ ಚಿಹ್ನೆಯನ್ನು ಹಾಕಲಾಗಿದೆ. ದಾಸರು ಕೊನೆಯಲ್ಲಿ ಸಿದ್ಧಾಂತ ಶಬ್ದದ ಪರ್ಯಾಯಪದವೆನಿಸಿದ 'ರಾದ್ಧಾಂತ' ಅಪ್ಪಟ ಸಂಸ್ಕೃತ ಪದವನ್ನು ಬಲಸುವುದರೊಂದಿಗೆ ಶ್ರೀ ಸುಖತೀರ್ಥ ಗುರು ಶಾಸ್ತ್ರಾನುಕರಿಸಿ ಪ್ರಸನ್ನವೆಂಕಟ ಮುಕುತಿಯ ಕೊಡುವನು ಎಂದೆನ್ನುತ್ತ ಆಚಾರ್ಯ ಮಧ್ವರ ಶಾಸ್ತ್ರ ಓದಿ ಅದನ್ನು ಅನುಸರಿಸುವವರಿಗೆ ಮುಕ್ತಿಲಭ್ಯ ಎಂದು ದೃಢವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಇದರಂತೆ ಅವರೋಹಣ ತಾರತಮ್ಯವು ಕನಕದಾಸರ "ಹರಿಭಕ್ತಿಸಾರ"ದಲ್ಲಿಯೂ ದೊರೆಯುತ್ತದೆ.

ದ್ವೈತದರ್ಶನದಲ್ಲಿ ವಿಶೇಷ ಮಹತ್ವ ಪಡೆದ ಈ 'ತಾರತಮ್ಯ'ಕ್ಕೆ ಜೀವ ಈಶ್ವರ ಹಾಗೂ ಜಡಗಳಲ್ಲಿ ಮೂಲತಃ ಇರುವ ಭಿನ್ನತೆಯೇ ಮುಖ್ಯ ಕಾರಣವಾಗಿದೆ. ಈ ಹಿನ್ನಲೆಯಲ್ಲಿ ಜೀವ-ಜೀವ ಭೇದ, ಜೀವ-ಜಡಭೇದ, ಜಡ-ಜಡ ಭೇದ ಜೀವೇಶ್ವರ ಭೇದ, ಜಡೇಶ್ವರ ಭೇದ ಎಂದು ದ್ವೈತ ದರ್ಶನವು ಪಂಚಭೇದಗಳನ್ನು ಅಂಗೀಕರಿಸಿದೆ. ಈ ಪಂಚಭೇದಗಳನ್ನೇ ಜೀವ ಈಶಗೆ ಭೇದ ಸರ್ವತ್ರ ಜೀವ ಜೀವರೆ ಭೇದವು ಜೀವ ಜಡಕೆ ಜಡ ಜಡಕೆ ಭೇದ ಭೇದ ಜಡ ಪರಮಾತ್ಮಗೆ ಎಂದು ಪುರಂದರದಾಸರು ವಿಶದಪಡಿಸಿದ್ದಾರೆ.

**ಇದರಂತೆ ಭೇದಿಸಿ ನೋಡಿರೊ ಭೇದವ ತಿಳಿಯಿರೊ**
**ಮಾಧವ ಜೀವ ಜಡರೊಳು ಕೋಲೆ**
**ಮಾಧವ ಜೀವ ಜಡರೊಳು ಎನುತಲಿ**
**ಬೋಧಿಸಿದನುಹಿತಮಾರ್ಗ ಕೋಲೆ**[೫೭]

57. ಸಮಗ್ರ ದಾಸಸಾಹಿತ್ಯ, ಸಂ.8, ಪು.375.

ಎಂದು ಇಡಿಯಾಗಿ ಸಂಗ್ರಹಿಸಿದ ಭೇದ ಮುಕ್ತಾವಳಿಯ ಮಾತಿನಂತೆ ಒಂದು ನಾಲ್ಕರ ಭೇದ ನಿಜರಿಗರುಹಿದೆಯಾ[58] ಪಂಚಭೇದ ವಿವರ ತಿಳಿದು ದ್ವಂದ್ವ ಜೀವೇಶರ ತಿಳಿದವಶಾಂತ[59] ಎಂದು ಮುಂತಾಗಿ ಬಿಡಿ ಬಿಡಿಯಾ-ಗಿಯೂ ಉಲ್ಲೇಖಗೊಂಡ ಪಂಚಭೇದ ವಿಚಾರಗಳನ್ನು ಪ್ರಸನ್ನವೆಂಕಟರಲ್ಲಿ ಕಾಣಬಹುದಾಗಿದೆ. ಅಂತೆಯೇ ತಾರತಮ್ಯ ಪಂಚಭೇದ ಸತ್ಯವೆಂದು ಮಾರುತಮತ ಪೊಂದಿದವರ ಸಲಹೆಂದು ಮುಖ್ಯಪ್ರಾಣ ಕರವ ಮುಗಿದೆ ಎಂದಿದ್ದಾರೆ. ಗೋಪಾಲದಾಸರು.

ಒಂದೊಂದು ನಿಮಿಷ ದಿ ಉಂಡು ತೇಗಿ। ಎಂದಿನಂತಿಪ್ಪ ಮುಕಂದನೆತ್ತ। ಒಂದಿಷ್ಟನ್ನಧಿಕವಾದರೆ ನೊಂದು ತಲೆ ಸುತ್ತಿ ದಂದುಗ ಬಡುವ ಜೀವ ವೃಂದವೆತ್ತ ಎಂಬ ವೈಕುಂಠ ವರ್ಣನೆಯ ಮಾತಿನಂತೆ ಜೀವ ಹಾಗೂ ಈಶ್ವರನಲ್ಲಿಯ ಸಾಮರ್ಥ್ಯ ಭೀನ್ನ ಭಿನ್ನವಾಗಿದೆ. ಮಾತ್ರವಲ್ಲ ಪ್ರಕೃತಿಯಂ ಬದ್ಧನಾ ಪ್ರಕೃತಿಯಾಳುವೆನೀನು। ಪುರುಷರಧೀನ ನಾನು ಪುರುಷರ ಪ್ರಭು ನೀನು[60] ಎನ್ನುವ ಪ್ರಸನ್ನವೆಂಕಟರಂತೆ ಹಾಗೂ ನಿತ್ಯ ಬದ್ಧನು ನಾನು ನಿತ್ಯ ಮುಕ್ತನು ನೀನು ಭೃತ್ಯನೋ ನಾನು ಪ್ರಭು ನೀನು ಪ್ರಭು ನೀನು ಮುರ್ಲೋಕ ವ್ಯಾಪ್ತನೋ ನೀನು ಅಣು ನಾನು ಎಂಬ ತತ್ವ ಸುವ್ವಾಲಿಯ ಮಾತಿನಂತೆ ಜೀವ ಹಾಗೂ ಹರಿಯಲ್ಲಿ ಅನೇಕ ವಿರುದ್ಧ ಗುಣಧರ್ಮಗಳಿರುವುದರಿಂದ ಅವರಿಬ್ಬರೂ ಭೀನ್ನ ಭಿನ್ನರೆಂಬುದು ವೇದ್ಯವಾಗುತ್ತದೆ. ಈ ಮೇಲೆ ಜೀವೇಶ್ವರರು ಭಿನ್ನ ಭಿನ್ನರೆಂಬುದನ್ನು ಸಂಯುಕ್ತಿಕವಾಗಿ ವಿವರಿಸಿದ್ದಾರೆ. ಜೀವ ಹಾಗೂ ಈಶ್ವರ ಒಂದೇ ಎನ್ನುವವರಿಗೆ 'ಶಿವನು ನೀನಾದರೆ ಶಿವರಾಣಿ ನಿನಗೇನು। ಅವಿವೇಕಿ ಮನುಜ ಈ ಮಾತುಕೋಲೆ। ಅವಿವೇಕಿ ಮನುಜ ಈ ಮಾತು ಕೇಳಿದರೆ। ಕವಿಗಳು ನಗರೆ ಕೈ ಹೊಯ್ದು ಕೋಲೆ। ಎಂದು ಮೋಹನದಾಸರು ಕೋಲುಹಾಡಿನ ಮೂಲಕ ಬಾಯಿಕಟ್ಟಿಸುವ ಸವಾಲನ್ನ ಒಡ್ಡಿರುವುದು

58. ಸಮಗ್ರ ದಾಸಸಾಹಿತ್ಯ, ಸಂ.8, ಪು.196.

59. ಸಮಗ್ರ ದಾಸಸಾಹಿತ್ಯ, ಸಂ.8, ಪು.312.

60. ಸಮಗ್ರ ದಾಸಸಾಹಿತ್ಯ, ಸಂ.8, ಪು.282.

ಬೆರಳು ಕಚ್ಚುವಂತಿದೆ. ಭಿನ್ನಗುಣ ಧರ್ಮಗಳಿರುವ ಜೀವ ಪರಮಾತ್ಮರು ಭಿನ್ನ ಭಿನ್ನರೆಂಬ ಈ ವಿಚಾರವನ್ನೇ ದ್ವಾಸುಪರ್ಣಾ ಎಂಬ ಉಪನಿಷತ್ತನ್ನು ಉಲ್ಲೇಖಿಸಿ ಸಾದರಗೊಳಿಸುವುದರೊಂದಿಗೆ--

**ಒಂದೇ ಹಕ್ಕಿ ಹಣ್ತಿಂತೈತೆ**
**ಮತ್ತೊಂದ್ಹಕ್ಕಿ ನೋಡುತದಪ್ಪ**
**ಹಣ್ತಿಂದ್ಹಕ್ಕಿ ಬಡವಾಗೈತೆ**
**ತಿನ್ನದ ಹಕ್ಕಿ ಬಲಿತೈತಣ್ಣ**
**ಸುಳ್ಳಲ್ಲ ನೀ ಕೇಳೋ ತಮ್ಮ**
**ದ್ವಾಸುಪರ್ಣ ಶ್ರುತಿಯಲ್ಲೈತೆ**

ಎಂದು ಮುಂತಾಗಿ ಬುಡು ಬುಡುಕೆ ಪದದ ವೇಷದ ಮೂಲಕ ಇನ್ನೂ ಆಕರ್ಷಕಗೊಳಿಸಿದ ಶ್ರೇಯಸ್ಸು ಪುರಂದರದಾಸರಿಗೇ ಸಲ್ಲುತ್ತದೆ.

ಹರಿಸರ್ವೋತ್ತಮತ್ವಕ್ಕೆ ಪೂರಕವಾದ ದ್ವೈತದರ್ಶನದ ಮತ್ತೊಂದು ಪ್ರಮುಖ ತತ್ವ 'ವಿಶ್ವಸತ್ಯತ್ವ' ವೈವಿಧ್ಯ ಹಾಗೂ ವೈಶಿಷ್ಟ್ಯಪೂರ್ಣವಾದ ಈ ಪ್ರಪಂಚವನ್ನು ನಾರಾಯಣನು ಸೃಜಿಸುವುದರಿಂದ ಅವನು ಸರ್ವಕರ್ತೃ, ಸರ್ವಸಮರ್ಥ, ಸರ್ವಜ್ಞ ಎಂದೆಲ್ಲ ಎನಿಸುವನು ಈ ವಿಶ್ವ ಸತ್ಯವಾಗಿದೆ ಎಂಬುದನು ಸತ್ಯಜಗತಿದು ಪಂಚಭೇದವು ಎಂದು ಶ್ರೀ ಶ್ರೀಪಾದರಾಜರು ಹಗೂ ಪುರಂದರದಾಸರು ಅದಭುತ ಜಗವ ನಿರ್ಮಿಸಿದ ಎಂದು ವಾದಿರಾಜರು ಹಾಗೂ ಪಂಚಭೇದಯುತ ಪ್ರಪಂಚ ಸುಸತ್ಯ ಎಂದು ಜಗನ್ನಾಥದಾಸರೇ ಮುಂತಾದವರು ವಿವರಿಸಿದ್ದಾರೆ.

ಜೀವನು ತನ್ನ ಸ್ವರೂಪವೆನಿಸಿದ ಸುಖವನ್ನು ಅನುಭವಿಸುವುದೇ ಮುಕ್ತಿ ಎಂಬ ದ್ವೈತದರ್ಶನದ ಮತ್ತೊಂದು ತತ್ವವನ್ನು ನಿತ್ಯ ನಿರ್ದುಃಖ ಸುಖ ಸ್ವರೂಪರಾಗಿ ಸುತ್ತ ಸುಳಿವರು ಎಂದ ವಾದಿರಾಜರು ಅಂಥ ಮುಕ್ತಿಯು ಸಾಯುಜ್ಯ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಈ ಯದಂದಿ ಚತುರ್ವಿಧವಾಗಿದೆ ಎಂದೂ ವಿವರಿಸಿದ್ದಾರೆ. ಹಸಿವು, ತೃಷೆ,

ರೋಗ ಮುಂತಾದ ದೋಷಗಳಿಂದ ದೂರವಾದ ಇಂಥ ಮುಕ್ತಿಯನ್ನು ಅಲ್ಲಿ ರೇತೋತ್ಸರ್ಜನವಿಲ್ಲ ಮೂತ್ರಪುರೀಕ್ಷವಿಲ್ಲ। ವಾತ ಪಿತ್ತ ಶ್ಲೇಷ್ಮ ಮೊದಲಿಲ್ಲ ಕೋಲೆ। ವಾತ ಪಿತ್ತ ಶ್ಲೇಷ್ಮ ಮೊದಲಿಲ್ಲ ಹಸಿ ತೃಷೆ। ಯಾತುರವೆಂಬೋದಲಿಲ್ಲ ಕೋಲೆ। ಎಂದು ಮುಂತಾಗಿ ಮೋಹನದಾಸರು ವರ್ಣಿಸಿದ್ದಾರೆ.

ಜೀವನು ತನ್ನ ಸ್ವರೂಪ ಸುಖವೆನಿಸಿದ ಮುಕ್ತಿಯನ್ನು ನಿರ್ಮಲಭಕ್ತಿಯಿಂದ ಸಾಧಿಸಬಹುದೆಂದು ತಿಳಿಸಿದ ದ್ವೈತದರ್ಶನ ನಿರ್ಮಲ ಭಕ್ತಿಯು ಮುಕ್ತಿಗೆ ಸಾಧನ ಎಂಬೀ ಪ್ರಮೇಯವನ್ನು ಸಹಜವಾಗಿಯೇ ವಿಸ್ತೃತವಾಗಿ ವಿವೇಚಿಸಿದೆ. ವಾಸ್ತವವಾಗಿ ಜೀವನು ಜ್ಞಾನಾನಂದ ಸ್ವರೂಪಿಯಾಗಿದ್ದರೂ ಸಂಸಾರ ದೆಶೆಯಲ್ಲಿ ಅವನಿಗೆ ಅಂತಹ ಅನುಭವ ಬಾರದಿರಲು ಅನಾದಿ ಅವಿದ್ಯೆ, ಕಾಮ, ಪ್ರಾರಬ್ಧಕರ್ಮ, ಸ್ವರೂಪಾಚ್ಛಾದಿಕಾ ಮತ್ತು ಪರಮಾಚ್ಛಾದಿಕಾ ಎಂಬೆರಡು ದುಷ್ಟ ಪ್ರಕೃತಿಗಳು, ಲಿಂಗದೇಹ ಹಾಗೂ ಭಗವದಿಚ್ಛೆ ಎಂಬ ಈ ಸಪ್ತಾವರಣಗಳು ಅಡ್ಡಿಯಾಗಿವೆ. ಇಂದ್ರಿಯ ನಿಗ್ರಹ ಗುರೂಪಸತ್ತಿ ಪ್ರಪಂಚದ ಬಗ್ಗೆ ವೈರಾಗ್ಯ, ಸದಾಚಾರ, ಸತ್ಕರ್ಮಾಚರಣೆಗಳ ಜೊತೆಗೆ ಗುರೂಪದೇಶದಿಂದ ಭಗವಂತನ ವಿಚಾರಗಳನ್ನು ಶ್ರವಣ, ಮನನ, ನಿಧಿಧ್ಯಾಸನಗಳ ಮೂಲಕ ದೃಢಪಡಿಸಿಕೊಂಡು ವಿವಿಧ ಭಕ್ತಿ ಪ್ರಕಾರಗಳ ಹಿನ್ನೆಲೆಯಲ್ಲಿ ನಿರಂತರ ಸಾಧನೆಗೈದಾಗ ಅದೇ ನಿರ್ಮಲಭಕ್ತಿ ಎನಿಸುತ್ತದೆ. ಇಂತಹ ಭಕ್ತಿಯಿಂದಲೆ ಜೀವನಿಗೆ ಸಂಸಾರ ಬಂಧನದಿಂದ ಮುಕ್ತಿ ದೊರೆಯುತ್ತದೆ ಎಂದಿದೆ ದ್ವೈತ ಸಿದ್ಧಾಂತ–

**ಹರಿಯಂಘ್ರಿಯ ಮೂಲದಾಸತ್ವವ ಹೊಂದಿ**
**ಪರಮ ಮಂಗಳ ನಾಮಸ್ಮರಣೆಯನು ಬಿಡದೆ**
**ಇರಲೆನ್ನ ಮನವು ಇರಲೆನ್ನ ತನುವು**
**ತರುಣಿ ಪುತ್ರ ಮಿತ್ರಾಸರ್ವರಿಂ ಪ್ರಿಯನೆಂದು**
**ಹರಿ ಚರಣಾಂಬುದಮೃತಾನುಂಬೊ ಸ್ನೇಹ**
**ದಿರಲೆನ್ನ ಮನವು ಇರಲೆನ್ನ ತನುವು**

**ನಿರುಪಾಧಿಕ ಪ್ರಿಯ ನಿರ್ಮಳ ಶ್ರುತಿಗೇಯ**
**ನಿರುತ ಪ್ರಸನ್ವೆಂಕಟ ಕೃಷ್ಣ ಸೇವೆಯಲಿರಲಿ[೬೧]**

ಎಂಬ ಪ್ರಸನ್ನವೆಂಕಟರ ಮಾತಿನಲ್ಲಿ ನಿರವಧಿಕಾನಂತಾನವದ್ಯ ಕಲ್ಯಾಣಗುಣತ್ವ ಜ್ಞಾನ ಪೂರ್ವಕ....... ಎಂದು ಮುಂತಾಗಿ ಶ್ರೀಮನ್ನ್ಯಾಯ ಸುಧಾಗ್ರಂಥದಲ್ಲಿ ಭಕ್ತಿಯಲಕ್ಷಣವನ್ನು ವಿವರಿಸುವ ಶ್ರೀ ಜಯತೀರ್ಥರ ಮಾತಿನ ಆಶಯವನ್ನು ಗುರುತಿಸಬಹುದಾಗಿದೆ.

ಶ್ರೀಹರಿಯು ಮಹಾಮಹಿಮಎಂಬ ಅರಿವಿನೊಂದಿಗೆ ಬಂಧುಗಳು ಧನಕನಕಾದಿ ವಸ್ತುಗಳು ಇವೆಲ್ಲಕ್ಕಿಂತಲೂ ಕೋಟಿಪಟ್ಟು ಪ್ರೀತಿಯನ್ನು ನಿರಂತರ ಅವನೆಡೆಗೆ ಹರಿಸುವುದೇ ಭಕ್ತಿ ಉಂತಹ ಭಕ್ತಿ ಪಡೆದ ಭಕ್ತನೇ ಮುಕ್ತನಾಗುವನು. ಆದರೂ ಇಂತಹ ಭಕ್ತನು ಏಕಾಂತಭಕ್ತನಿಗೆ ಸಮನಲ್ಲ ಏಕಾಂತಾನಾಂನ ಕಸ್ಯ ಚಿದರ್ಥೇ ನಾರಾಯಣೋ ದೇವಃ। ಸರ್ವಮನ್ಯತ್ತ ದರ್ಥಕಂ ಎಂದಂತೆ ಏಕಾಂತ ಭಕ್ತನು ಮೋಕ್ಷವೂ ಸೇರಿದಂತೆ ಯಾವುದನ್ನು ಬಯಸಲಾರೆ. ಅಂತೆಯೇ ಇವನು ಉಲಿದವರಿಗಿಂತ ಅತ್ಯಮತ ಜೇಷ್ಠ ಹಾಗೂ ಶ್ರೇಷ್ಠ ಭಕ್ತ ನೆನಿಸಿದ್ದಾನೆ ಎಂಬುದನ್ನು ಪ್ರಸನ್ನವೆಂಕಟರು ನಿಷ್ಠರಿನ್ನೊಲ್ಲರು ನಾಕವಾಸದ ಸುಖ। ಕೊಟ್ಟರಿನ್ನೊಲ್ಲರು ಸಕಲ ಸಂಪದವನು। ಅಷ್ಟಾಂಗ ಯೋಗದ ಪಥ ಸಿದ್ಧಿಯೊಲ್ಲರು। ಕೃಷ್ಣನ ಪಾದಾಬ್ಜಮಕರಂದ ಭಕುತರು। ತುಷ್ಟಿಯನೊಲ್ಲರು ಸ್ವರೂಪದ ಅನುಭವಾ। ನಿಷ್ಟ ಭಕುತಿಗೆ ಮೋಹಿತ ಮರುಳರು[62] ಎಂಬ ಸುಳಾದಿಯಲ್ಲಿ ವಿವರಿಸಿದ್ದಾರೆ. ಏಕಾಂತ ಭಕ್ತರು ಬೇಕಾದುದನ್ನು ನೀಡುವ ಶ್ರೀಹರಿಯಲ್ಲಿ ಯಾಕೆ ಏನನ್ನು ಬೇಡವಿವುದಿಲ್ಲ? ಅದರಂತೆ ಇಷ್ಟು ಉನ್ನತಭಕ್ತರೆನಿಸಿದವರಿಗೆ ಭಗವಂತನು ಸಂಪತ್ತು ಮುಂತಾದವನ್ನು ಯಾಕೆ ಕೊಡುವುದಿಲ್ಲ? ಎಂಬ ಪ್ರಶ್ನೆಗಳಿಗೆ ಪ್ರಸನ್ನವೆಂಕಟರೇ ಇದೇ ಸುಳಾದಿಯಲ್ಲಿ–

**ಹರಿತನ್ನೇ ಕಾಂತಿಗಳಿಗೆ ಕೊಡ ವೈಭವವ**
**ಸಿರಿ ಸಂಪದದ ಸೌಖ್ಯದ ಲಂಪಟವ**

---

**61.** ಸಮಗ್ರ ದಾಸಸಾಹಿತ್ಯ, ಸಂ.8.

**62.** ಸಮಗ್ರ ದಾಸಸಾಹಿತ್ಯ, ಸಂ.8, ಪು.421.

**ಹರಿತನ್ನೇಕಾಂತಿಗಳಿಗೆ ಕೊಡ ಅಖಿಳದ**
**ಅರಸುತನದ ಸೌಭಾಗ್ಯದ ಬಯಕೆಯ**
**ಕರುಣಶಂಬುಧಿ ತನ್ನ ಶರಣ ಜನರ ಭವ**
**ಹಾರಕನೆಂಬೊ ಬಲು ಬಿರುದ ರಕ್ಷಕನಾಗಿ**
**ಅರಿಭಯದ ಬೆದರಿಕೆ ಮನೋವ್ಯಥಾವ್ಯಸನವು**
**ಬರುವುದೆಂದರಿದ್ದು ಶ್ರೀ ಪ್ರಸನ್ನವೆಂಕಟ ಕೃಷ್ಣ**[63]

ಎಂದು ಉತ್ತರವನ್ನು ನೀಡಿದ್ದಾರೆ. ಎಷ್ಟೇ ತರಬೇತಿ ಪಡೆದಿದ್ದರೂ ಮನಸ್ಸು ದೃಢವಾಗಿರುವುದರ ಬಗ್ಗೆ ಉನ್ನತಜ್ಞಾನಿಗಳಿಗೂ ವಿಶ್ವಾಸವಿಲ್ಲ ಎಂದಿದೆ ಶ್ರೀಮದ್‌ಭಾಗವತ ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವತ್ ದೃಢಂ ಎಂಬ ಅರ್ಜುನನಂತೆ ಎಲ್ಲ ಹರಿದಾಸರಿಗೂ ಮನಸ್ಸಿನ ಚಾಂಚಲ್ಯದ ಅನುಭವವಿದೆ. ಅಂತೆಯೇ ದಾಸರು ನಿನ್ನಿಂದ ಭವಬಂಧನವು ಮೋಚನವು ನೋಡು ನಿನ್ನಿಂದ ಪ್ರಸನ್ನವೆಂಕಟೇಶ ನೊಲುಮೆ ಆದ್ದರಿಂದ ಚಂಚಲಿಸದಿರು ನೀನು ಚತುರನಾಗು ಎಂದು ಮನಸ್ಸನ್ನು ಸ್ಥಿರೀಕರಿಸುವ ಪ್ರಯತ್ನ ನಡೆಸಿದ್ದಾರೆ. ಮನಸ್ಸಿನ ಚಂಚಲತೆಯಿಂದ ತನ್ನ ಭಕ್ತರು ಅಧಃ ಪತನ ಹೊಂದಬಾರದೆನ್ನುವ ಕರುಣಾಪೂರ್ಣ ದೃಷ್ಟಿಯಿಂದ ಭಗವಂತನು ಏಕಾಂತಭಕ್ತಿರಿಗೆ ಬೇಕುಬೇಕಾದ್ದನ್ನೆಲ್ಲ ನೀಡುವುದಿಲ್ಲ ಎಂದಿದ್ದಾರೆ ದಾಸರು.

ದ್ವೇತದರ್ಶನದಂತೆ ಹರಿದಾಸರೂ ಸಹ ವಿಚಾರ ಸಂಹಿತೆ ಹಾಗೂ ಆಚಾರ ಸಂಹಿತೆ ಈ ಎರಡೂ ವಿಷಯಗಳ ಕಡೆಗೆ ಸಾಕಷ್ಟು ಗಮನಹರಿಸಿರುವುದು ವೇದ್ಯವಾಗುತ್ತದೆ. ಸ್ಥಳಾಭಾವದಿಂದ ಅದರ ವಿಸ್ತೃತ ವಿವರಣೆ ಇಲ್ಲಿ ಸಾಧ್ಯವಿಲ್ಲ ಅದು ಈ ಲೇಖಕದ ಉದ್ದೇಶವೂ ಅಲ್ಲ. ಆದರೂ ಒಂದೆರಡು ನಿದರ್ಶನಗಳನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದಾಗಿದೆ. ಹರಿನಾಮ ಸ್ಮರಣೆ ಇದು ಮಾಧ್ವರ ದಿನಚರಿಯ ಜೀವಾಳ. ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋನ ಜಾತುಚಿತ್ ಯಾವಾಗಲೂ ಹರಿಯ ಸ್ಮರಣೆಮಾಡಬೇಕು

63. ಸಮಗ್ರ ದಾಸಸಾಹಿತ್ಯ, ಸಂ.8, ಪು.420.

ಅವನ ವಿಸ್ಮರಣೆ ಸರ್ವಥಾ ಕೂಡದು ಎಂಬ ಮಧ್ವರ ಮಾತು ನಿನ್ನ ಸ್ಮೃತಿಯೇ ವಿಧಿ ವಿಸ್ಮೃತಿಯೇ ನಿಷೇಧ। ನಿನ್ನ ಸ್ಮೃತಿಯೇ ಪುಣ್ಯ ವಿಸ್ಮೃತಿಯೇ ಪಾಪ ಎಂಬ ಗೋಪಾಲದಾಸರಲ್ಲಿ ಕನ್ನಡ ರೂಪಾಂತರಗೊಂಡಿದೆ.

ಇದರಂತೆ ನಿನ್ನ ನಾಮದ ಸ್ಮರಣೆಯೆ ಶುಭಕರ್ಮವು। ಧರ್ಮಾರ್ಥ ಕಾಮಮೋಕ್ಷಗಳ ಮೂಲವಿದೆಂದು[64] ಎಂಬ ಪ್ರಸನ್ನವೆಂಕಟರ ಮಾತಿನಲ್ಲೂ ಇದೇ ಭಾವವನ್ನು ಗಮನಿಸಬಹುದು. ಹರಿವಿಸ್ಮರಣೆಯಿಂದ ಪಾಪಸಂಗ್ರಹವಾಗುವುದರಿಂದ ಮಾಧ್ವರ ದಿನಚರಿ ಹರಿನಾಮಸ್ಮರಣೆಯಿಂದ ಹಾಸುಹೊಕ್ಕಾಗಿದೆ. ಬೆಳಿಗ್ಗೆ ಏಳುವಾಗ, ರಾತ್ರಿ ಮಲಗುವಾಗ ಮಲಗಿದ ನಂತರ ಮಧ್ಯದಲ್ಲಿ ಎಚ್ಚರವಾದಾಗ ಅಥವಾ ಕೆಲವೊಮ್ಮೆ ತೋಷದಿಂ ನಿದ್ರೆಗೈದು ಜಾವ ಜಾವಕೆ ಎದ್ದು ನೆರೆಹೊರೆಯು ಕೇಳ್ವಂತೆ ಪಾವನ ಚರಿತ್ರ ಹಯವದನನ ನೆನೆಯ ಬೇಕು ಎಂಬ ವಾದಿರಾಜರ ಮಾತಿನಿಂದ ನಾಮಸ್ಮರಣೆಯ ಮಹತ್ವ ಸ್ಪಷ್ಟವಾಗದಿರದು.

ನಹ್ಯಮ್ಮಯಾನಿತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ। ತೇ ಪುನಂತ್ಯುರು ಕಾಲೇನ ದರ್ಶನಾದೇವ ಸಾಧವಃ॥ ಅಂದರೆ ಭಗವಂತನ ಜ್ಞಾನ ಸಂಪಾದನೆ ಮಾಡಿ ಅವನ ಚರಪ್ರತಿಮೆಗಳೆನಿಸಿದ ಬ್ರಹ್ಮಜ್ಞಾನಿಗಳು ತೀರ್ಥಕ್ಷೇತ್ರ ದೇವ ಪ್ರತಿಮೆಗಳಿಗಿಂತ ಶೀಘ್ರವಾಗಿ ಅನುಗ್ರಹಿಸಿ ಉದ್ಧರಿಸುವರು ಎಂದೆನ್ನುತ್ತದೆ ಭಾಗವತ. ಇದನ್ನೇ ತೀರ್ಥಸ್ನಾನವು ಹಲವು ಕಾಲೋತ್ತರ ಕಾಹುದು ಫಲವು। ಮೂರ್ತಿ ಔಪಾಸವು ಧರ್ಮಾರ್ಥ ಮುಂದಣ ಅನುವು। ಅರ್ಥಗಳ ವಿತರಣವು ಶೂನ್ಯಾರ್ಥ ಸಮಯಕೆ ದಣಿವು। ಸಾರ್ಥಕವು ಸಧ್ಯಸಾಧುನಿಕರದ ಗಾತ್ರ ಕ್ಷೇತ್ರ ಯಾತ್ರೆಯ ಬಿಡದೆ[65] ಎಂದು ಕನ್ನಡದ ಕನ್ನಡಿಯಲ್ಲಿ ಪ್ರತಿಬಿಂಬಿಸಿದವರು ಪ್ರಸನ್ನವೆಂಕಟರು.

ಮಧ್ವಮತವೇ ಶ್ರೇಷ್ಠವೆಂಬ ಗಟ್ಟಿ ನಿಷ್ಠೆ ಪ್ರಸನ್ನವೆಂಕಟರದು. ಇದಕ್ಕೆ ಇತರ ಮತಗಳ ವಿಮರ್ಶೆ ಹೊಂದಿದ ಅವರ ಈ ಮುಂದಿನ ಕೃತಿಗಳೇ ಸಾಕ್ಷಿ

**64. ಸಮಗ್ರ ದಾಸಸಾಹಿತ್ಯ, ಸಂ.8, ಪು.406.**

**65. ಸಮಗ್ರ ದಾಸಸಾಹಿತ್ಯ, ಸಂ.8, ಪು.321.**

**ಮೊಗಕೆಲ್ಲ ಹೊಗೆ ಸುತ್ತಿ ಬಗೆಗೆಟ್ಟನೊಬ್ಬ**
**ಜಗಳಾಡ್ವ ಘಟಪಟದ ಬಾಯಿಬಡಕನೊಬ್ಬ**
**ನಿಗಮಾರ್ಥವನು ಕೆಡಿಸುವ ಖಳನೊಬ್ಬ ತ್ರಿ**
**ಜಗದೊಳಗುಂಡುಟ್ಟು ಬಾಯಾರ್ವನೊಬ್ಬ ಈ**
**ವಿಗಡ ವಾದಿಜಗಮೃಗರಾಜ ಗುರು ಮಧ್ವ**
**ಸುಗುಣಾಬ್ಧಿ ಪ್ರಸನ್ನ ವೆಂಕಟನ ತೋರಿದನಾಗಿ**

ಪ್ರಸಕ್ತ ಉಗಾಭೋಗದಲ್ಲಿ ಕ್ರಮವಾಗಿ ಮೀಮಾಂಸಾ, ನ್ಯಾಯಶಾಸ್ತ್ರ, ಅದ್ವೈತ ಹಾಗೂ ವಿಶಿಷ್ಟಾದ್ವೈತ ದರ್ಶನಗಳನ್ನು ವಿಮರ್ಶಿಸಿ ಅವುಗಳಲ್ಲಿಯ ಕೊರತೆಗಳನ್ನು ಎತ್ತಿ ತೋರಿಸಲಾಗಿದೆ. ಇದರಂತೆ–

**ಯಾತರಭಿಜ್ಞತೆ ಯಾತರ ಭಕುತಿ ಶ್ರೀ**
**ನಾಥಾಂಘ್ರಿ ವಿಮುಖಾದ ಸೂತಕಿಗಯ್ಯ**
**ಕಪಟನಾಟಕ ಸೂತ್ರ ಅನಂತಗುಣ ನಿತ್ಯ**
**ತೃಪುತ ಮುಕುತ ನೆಂದನಾದಿ ನಿರ್ಗುಣನೆಂದು**
**ಉಪಾಸನೆವಿಡಿದ ಸೋಹಂಭಾವ ದವಗೆ ॥೧॥**

**ಅಪುಶಾಯಿ ಅಗಣಿತ ಆನಂದ ಬ್ರಹ್ಮಾದಿ**
**ತಾಪಸರರರಸ ಪುರುಷೋತ್ತಮಗೆ**
**ಉಪಚಾರಕ್ಷರಿಯೆಂದು ಹರಕರ್ಮ ರವಿಗಣಾ**
**ಧಿಪಕೆ ಉತ್ತಮರೆಂಬ ಕಪಟಮಾನಿಸಗೆ ॥೨॥**

**ಪೂರ್ಣಪ್ರಜ್ಞರ ಮತ ನವಭಕುತಿಗಳ**
**ನಿರ್ಣಯದಲಿ ತರತಮವಿಲ್ಲದೆ**
**ಅರ್ಣವ ಕಲಿತೇ ನಿನ್ನಾಕಾಶ ಚರಿಸೇನು**
**ಪೂರ್ಣ ಪ್ರಸನ್ವೆಂಕಟೇಶನೊಪ್ಪಿರದೆ॥೩॥**

ಎಂಬಲ್ಲಿಯೂ ಇತರ ಮತಗಳ ವಿಮರ್ಶೆಯ ಜೊತೆಗೆ ಆಚಾರ್ಯಮಧ್ವರ ಭಕ್ತಿಮಾರ್ಗವಲ್ಲದೆ ಬೇರಾವುದೇ ಮಾರ್ಗವು ಶುದ್ಧ ಭಕ್ತಿ ಮಾರ್ಗವಾಗದು. ಅಂತೆಯೇ ಅದರಿಂದ ನಮ್ಮ ಶ್ರಮ ಸಾರ್ಥಕವಾಗದು

ಮುಕ್ತಿ ದೊರೆಯದು ಎಂದು ಎಚ್ಚರಿಸಿದ ಪ್ರಸನ್ನವೆಂಕಟರಲ್ಲಿ ಮಧ್ವಮತದ ನಿಷ್ಠೆ ಎದ್ದು ಕಾಣುತ್ತದೆ.

'ಅಪರಾಧ ಸಹಸ್ರಾಣಿ ಕ್ರಿಯಂ ತೇ ಅಹರ್ನಿಶಂ ಮಯಾ। ತಾನಿಸರ್ವಾಣಿ ದೇವೇಶ ಕ್ಷಮಸ್ವ ಪುರುಷೋತ್ತಮ' ಎಂದರೆ 'ನಾನು ಮಾಡಿದ, ಮಾಡುತ್ತಿರುವ ಸಾವಿರಾರು ತಪ್ಪುಗಳನ್ನು ಕ್ಷಮಿಸು ಭಗವಂತನೆ' ಎಂದು ಪ್ರಾರ್ಥಿಸಿದಾಗ ಶ್ರೀಹರಿ ಕ್ಷಮಿಸಿ ಅನುಗ್ರಹಿಸುವನು ಎಂಬ ದೃಢನಂಬಿಕೆ ಮಾಧ್ವರದು. ಅಂತೆಯೇ ಈ ಪ್ರಾರ್ಥನೆ ಮಧ್ವರಲ್ಲಿ ಸರ್ವೇ ಸಾಮಾನ್ಯ. ಇದಂತೆ ಪ್ರಸನ್ನವೆಂಕಟರು ತಪ್ಪುಗಳೆಲ್ಲ ಪರಿಹರಿಸುವ ನಮ್ಮಪ್ಪನಲ್ಲವೇ ನೀನು ಎಂಬ ಎಂಟು ಸಾಲುಗಳ ಏಳು ನುಡಿಗಳ ಪದ್ಯದಲ್ಲಿ ಮನುಷ್ಯನು ನಿತ್ಯ ಮಾಡುತ್ತಿರುವ ಕೆಲ ಅಪರಾಧಗಳ ಉಲ್ಲೇಖಿಸಿ ಅವುಗಳನ್ನು ಕ್ಷಮಿಸೆಂದು ಪ್ರಾರ್ಥಿಸಿದ್ದಾರೆ. ಉದಾಹರಣೆಗಾಗಿ ಒಂದೆರೆಡನದನು ಈ ಮುಂದಿನಂತೆ ಪರಿಶೀಲಿಸಬಹುದು.

**'ಕಣ್ಣಲಿ ಕೃಷ್ಣಾಕೃತಿ ನೋಡದೆ ಪರ**
**ಹೆಣ್ಣು ನೋಡಿದ ಕಣ್ಣು ತಪ್ಪು**
**ನಿನ್ನ ಕಥಾಮೇತವಲ್ಲದೆ ಹರಟೆಯ**
**ಮನ್ನಿಸುವ ಕಿವಿತಪ್ಪು**
**ಅನ್ನವ ನಿನಗರ್ಪಿದಲೆ ಹರುಷದಿ**
**ಉಣ್ಣುವ ನಾಲಗೆ ತಪ್ಪು**
**ಚಿನ್ಮಯನೆ ನಿನ್ನ ಚರಣಕ್ಕೆರಗದೆ**
**ಉನ್ಮತ್ತರನಮಿಸುವ ತಲೆತಪ್ಪು**
......................
**ಯಜ್ಞೇಶ ಪ್ರಸನ್ನವೆಂಕಟಕೃಷ್ಣನಾ**
**ಮಾಗ್ನಿಗೆ ತೃಣವೀ ತಪ್ಪು**[66]

ಎಂದು ಹೇಳುತ್ತಾ ಭಗವಂತನ ಭಕ್ತಿ ಪುರಸ್ಸರವಾದ ನಾಮಸ್ಮರಣೆಯಿಂದ ಎಲ್ಲ ಪಾಪಗಳನ್ನು ಕಳೆದುಕೊಳ್ಳಬಹುದೆಂಬ ಭಾಗವತದ ಸಂದೇಶವನ್ನು

66. ಸಮಗ್ರ ದಾಸಸಾಹಿತ್ಯ, ಸಂ.8, ಪು.194.

ಕೊನೆಗೆ ತಿಳಿಸಿ ತಪ್ಪುಗಳನ್ನು ತೊಳೆದುಕೊಳ್ಳುವ ಪರಿಹಾರೋಪಾಯವನ್ನು ದಾಸರುಸೂಚಿಸಿದ್ದಾರೆ. ಅಂತೆಯೇ ಈ ಹರಿನಾಮಸ್ಮರಣೆ ಸಕಲ ಸಾಧನೆಯ ಮೂಲವಾಗಿದೆ.

ಇದರಂತೆ ಸಾಧಕನ ದೈನಂದಿನ ಚಟುವಟಿಕೆಗಳೆಲ್ಲವೂ ಹರಿಪೂಜೆಯಾಗ ಬೇಕೆನ್ನುತ್ತದೆ ದ್ವೈತದರ್ಶನ. ಇದನ್ನು ಸಾಧಿಸಲು ಅದು ಸೂಜಿಸಿದ ಮಾಂತ್ರಿಕ ಶಕ್ತಿ ಪರಮಾತ್ಮನ ಅನುಸಂಧಾನ ಪರಮಾತ್ಮನ ಅರಿವಿನಿಂದ ಮಾಡಿದ ಪ್ರತಿಯೊಂದು ಕಾರ್ಯವೂ ಸಾರ್ಥಕ. ಆದ್ದರಿಂದ ಇದು ಬಲವಿಲ್ಲದವರಿಗೆ ಸುಲಭಪೂಜೆಯೂ ಹೌದು ನಡೆವುದೇ ಹರಿಯಾತ್ರೆ ನುಡಿವುದೇ ಹರಿನಾಮ। ಕುಡಿವ ನೀರುಗಳೇ ಅಭಿಷೇಕ. ಅಭಿಷೇಕ ದಿನದಿನದಿ ಒಡಲಿಗುಂಬುದೆ ನೈವೇದ್ಯ ಎಂಬ ಜಗನ್ನಾಥದಾಸರಂತೆ ಇರುಳು ಹಚ್ಚುವ ದೀಪ ಹರಿಗೆ ನೀರಾಜನವು। ತಿರುಗಾಡಿ ದಣಿಯುವುದೇ ಹರಿಗೆ ಪ್ರದಕ್ಷಿಣೆಯು ಎಂದು ಪುರಂದರದಾಸರೇ ಮುಂತಾದ ಹರಿದಾಸರ ಮಾತು ಸಾಧಕರಿಗೆ ಸುಲಭ ಸಾಧನ ಮಾರ್ಗ ದರ್ಶಕವಾಗಿದೆ.

ದ್ವೈತದರ್ಶನದ ಈ ನವಪ್ರಮೇಯಗಳಂತೆ ಬಿಂಬ – ಪ್ರತಿಬಿಂಬ ಭಾವ, ಸೃಷ್ಟಿ ಪ್ರಕ್ರಿಯೆ, ಅಪರೋಕ್ಷಜ್ಞಾನ, ತ್ರಿವಿಧ ಕರ್ಮಕ್ಷಯಗಳಂತಹ ಇನ್ನು ಅನೇಕ ದ್ವೈತದರ್ಶನದ ವಿಚಾರಗಳು ಹರಿದಾಸರಲ್ಲಿ ನಿರೂಪಣೆಗೊಂಡಿವೆ. ಹರಿಸರ್ವೋತ್ತಮತ್ವವು ದಾಸರ ಉಸಿರಾಗಿದ್ದುದರಿಂದ ಅವರ ನುಡಿಗಳಲ್ಲಿ ಮೇಲಿಂದ ಮೇಲೆ ಹರಿಸರ್ವೋತ್ತಮತ್ವ ವಿಚಾರ ಕಾಣಿಸಿಕೊಂಡರೆ ಆಶ್ಚರ್ಯವಿಲ್ಲ ಅಂತೆಯೇ ಅದು ದಾಸರಲ್ಲಿ ಪ್ರಥಮ ಪ್ರಾಶಸ್ತ್ಯ ಪಡೆದಿದೆ.

ದಾಸರು ಸಂಗೀತ, ನೃತ್ಯಗಳಂಥ ವೈಶಿಷ್ಟ್ಯಗಳ ಹಿನ್ನೆಲೆಯಲ್ಲಿ ತತ್ವ ಸಿದ್ಧಾಂತಗಳನ್ನು ವಿವರಿಸುವಷ್ಟಕ್ಕೆ ತೃಪ್ತರಾಗಲಿಲ್ಲ, ಅವರು ಲೋಕನೀತಿಯಂತಹ ತಮ್ಮ ಮಾತುಗಳಲ್ಲಿ ಸುಖ ಜೀವನದ ಸಂದೇಶ ನೀಡುವ ಮೂಲಕ ಸಾರ್ಥಕ ಬದುಕಿನ ಕರೆ ನೀಡಿದ್ದಾರೆ. ಜೀವನ ದುಃಖ ಪರಿಹಾರಕ್ಕಾಗಿ ಸಂಸಾರತ್ಯಗದ ಉಪದೇಶ ಅನೇಕ ದಾರ್ಶನಿಕರಲ್ಲಿ ಕಂಡುಬರುವುದಾದರೂ ಅಂತಹ ಸಂಸಾರತ್ಯಾಗ ಅಷ್ಟೊಂದು ಸುಲಭವಲ್ಲ ಆದರೆ ದುಃಖ ಮಯವಾದ

ಸಂಸಾರವನ್ನೇ ಸಾಧನ ಕ್ಷೇತ್ರವನ್ನಾಗಿ ಮಾರ್ಪಡಿಸಿರುವುದು ದಾಸರ ವೈಶಿಷ್ಟ್ಯ ಈಸ ಬೇಕು ಇದ್ದು ಜೈಸಬೇಕು, ನಾರಿಯ ಧಾರುಣಿಯ ಧನವ ಬಿಟ್ಟರಾಯಿತೆ ಇದು ವೈರಾಗ್ಯವಲ್ಲ ನೀರಿನೊಳಗೆ ಇನ್ನು ಕಮಲವು ಇದ್ದಂತೆ. ಕೆರೆಯ ನೀರನು ಕೆರೆಗೆ ಚೆಲ್ಲಿದಂತೆ ಶ್ರೀಯರಸನಿತ್ತುದನ್ನು ಅವನಿಗೆ ಸಮರ್ಪಿಸಿ ಫಲ ಭೋಗಿಸುವುದೇ ನಿಜವಾದ ಕರ್ತವ್ಯಾಚರಣೆ ಕಲ್ಲಾಗಿ ಇರಬೇಕು ಕಠಿಣಭವ ತೊರೆಯೊಳಗೆ। ಬಿಲ್ಲಾಗಿ ಇರಬೇಕು ಬಲ್ಲವರೊಳಗೆ ತಾಳುವಿಕಿಗಿಂತ ತಪವು ಬೇರಿಲ್ಲ ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಂದಿದ್ದಾರೆ. ಹರಿದಾಸರು ಹೆಣ್ಣು, ಹೊನ್ನು, ಮಣ್ಣು ಈ ಕ್ಷಣತ್ರಯವನ್ನು ನಿಯಂತ್ರಿಸಿ ಬಾಹ್ಯ ಹಾಗೂ ಆಂತರಿಕ ಶುದ್ಧಿಗಳೊಂದಿಗೆ ಭಗವದ್ಭಕ್ತಿಯಿಂದ ಸ್ವವಿಹಿತ ಕರ್ತವ್ಯಾಚರಣೆಗೆ ಹರಿದಾಸರು ಕರೆನೀಡಿದ್ದಾರೆ. ತಮ್ಮ ತಮ್ಮ ಕರ್ತವ್ಯದಲ್ಲಿ ನಿರತವಾಗಿ ಸಿದ್ಧಿಯನ್ನು ಪಡೆಯ ಬಹುದೆಂಬ ಗೀತಾಚಾರ್ಯನ ಸಂದೇಶವನ್ನು ಹರಿದಾಸರು ನೆನಪಿಸಿದ್ದಾರೆ.

ದಾಸಸಾಹಿತ್ಯದ ಪ್ರಮುಖ ಕಾಳಜಿ ಕಳಕಳಿಯಾಗಿದ್ದ ದ್ವೈತಸಿದ್ಧಾಂತವನ್ನು ಪ್ರಚುರಗೊಳಿಸುವಲ್ಲಿ ದಾಸರು ವಹಿಸಿದ ಪರಿಶ್ರಮವು ಅಪೂರ್ವವಾದುದು. ದಾಸವಾಙ್ಮಯದಲ್ಲಿ ಎದ್ದು ಕಾಣಿಸುವ ವಿಚಾರಗಳು ಎರಡು. 'ಒಂದು–ತತ್ವಪ್ರತಿಪಾದನೆ, 'ಇನ್ನೊಂದು – ಲೋಕನೀತಿ'ಅಂತರಂಗ ನಿವೇದನೆ ಭಗವಂತನ ಲೀಲಾವಿನೋದ, ಭಕ್ತಿಯ ವಿವಿಧ ಹಂತಗಳು ಮುಂತಾದವೆಲ್ಲವೂ ಇವೆರಡರಲ್ಲಿಯೇ ಅಡಕಗೊಳ್ಳುತ್ತವೆ. ವಾಸ್ತವವಾಗಿ ಈ ಮೇಲಿನದೂ ಸಹ ಸ್ಥೂಲವಾದ ವಿಭಜನೆ ಒಂದು ದೃಷ್ಟಿಯಿಂದ ಲೋಕನೀತಿಯಂತಹ ಮಾತುಗಳ ಉದ್ದೇಶವೂ ಸಹ ತತ್ವ ಪ್ರತಿಪಾದನೆಯೇ ಲೋಕನೀತಿ ಯಂತಹ ಮಾತುಗಳು ವ್ಯಕ್ತಿಯಲ್ಲಿ ಸದ್ಗುಣಗಳನ್ನು ಬೆಳೆಸುವುದರೊಂದಿಗೆ ಅವನನ್ನು ಭಗವದ್ಭಕ್ತನನ್ನಗಿ ಪರಿವರ್ತಿಸಿ ಜೀವನಲ್ಲಿಯ ಅಸ್ವಾತಂತ್ರ್ಯ ಹಾಗೂ ಪರಮಾತ್ಮನ ಪರಮ ಸ್ವಾತಂತ್ರ್ಯಗಳನ್ನು ಮನಗಾಣಿಸಿ ಕೊಡುತ್ತವೆ. ಹೀಗೆ ದಾಸಸಾಹಿತ್ಯದ ವಿಚಾರವೆಲ್ಲವೂ ಅಂತಿಮವಾಗಿ ತತ್ವಪ್ರತಿಪಾದನೆಯಲ್ಲಿಯೇ ಪರ್ಯವಸಾನೆಗೊಳ್ಳುತ್ತದೆ.

ದಾಸರು ದ್ವೈತ ಸಿದ್ಧಾಂತವನ್ನು ಅಪ್ಪಿದಂತೆ ಹರಿಸರ್ವೋತ್ತಮತ್ವವನ್ನು ಒಪ್ಪಿದವರು. ಸರ್ವೋತ್ತಮನಾದ ಶ್ರೀಹರಿಗೆ ಸರ್ವವನ್ನು ಸಮರ್ಪಿಸಿದ ದಾಸರ ನಡೆ–ನುಡಿ ಎಲ್ಲವೂ ಭಕ್ತಿಪೂರ್ಣ ತತ್ವಪೂರ್ಣ ಹರಿದಾಸ್ಯವನ್ನು ಸ್ವೀಕರಿಸಿದ ದಾಸರು ಹರಿಯು ಸರ್ವೋತ್ತಮ ಚೇತನರಾಶಿಯು ಶ್ರೀಹರಿಯ ಅಧೀನ ಮುಂತಾದ ತತ್ವಗಳನ್ನು ಬೋಧಿಸುವುದರೊಂದಿಗೆ ಸ್ವತಃ ಆಚರಿಸಿಯೂ ತೊರಿಸಿದರು. ರಾಮಾಯಣ, ಮಹಾಭಾರತ, ಭಾಗವತಗಳಂತಹ ಪೌರಾಣಿಕ ಕಥೆಗಳ ವಿವರಣೆಯೇ ಆಗಲಿ, ತ್ರಿಕರಣ ಶುದ್ಧಿ ದಾನ ಧರ್ಮಗಳಂತಹ ಲೋಕನೀತಿಯ ನಿರೂಪಣೆಯೇ ಆಗಲಿ ಗೋಪಿ ಚಂದನಧಾರಣ, ಸಂಧ್ಯಾವಂದನಗಳಂತಹ ಮತೀಯ ಆಚರಣೆಗಳಾಗಲಿ ಇಷ್ಟೇ ಏಕೆ ಭೋಜನ ಜಲಪಾನಗಳಂತಹ ಸಾಮಾನ್ಯ ಚಟುವಟಿಕೆಗಳಲ್ಲೂ ಸಹ ದಾಸರಿಂದ ಒಂದಲ್ಲ ಒಂದು ಧಾರ್ಮಿಕ, ಶಾಸ್ತ್ರೀಯ ತತ್ವ ಪ್ರತಿಪಾದಿತವಾಗಿರುವುದನ್ನು ನಾವು ಗುರುತಿಸಬಹುದಾಗಿದೆ. ಇದಕ್ಕೆ ಪ್ರಸನ್ನ ವೆಂಕಟರೂ ಹೊರತಲ್ಲ ಕೀರ್ತನೆ, ಸುಳಾದಿ, ಉಗಾಭೋಗಗಳ ಜೊತೆಗೆ ನಾರದ ಕೊರವಂಜಿ, ಶ್ರೀಕೃಷ್ಣ ಪಾರಿಜಾತ, ನಾರಾಯಣ ಪಂಜರ, ಭಾಗವತ, ಭೇದಮುಕ್ತಾವಲಿಗಳಂತಹ ದಾಸಸಾಹಿತ್ಯದ ಇತರ ಕಾವ್ಯಪ್ರಕಾರಗಳಲ್ಲೂ ಇವರ ಸಾಧನೆ ಅಪಾರವಾಗಿದೆ.

ಭೇದಮುಕ್ತಾವಲಿಯಲ್ಲಂತೂ ಬೀಗರ ಸಂಭಾಷಣೆಯಂತಹ ನವೀನ ಹಾಗೂ ಪ್ರಭಾವಿ ಮಾಧ್ಯಮದ ಮೂಲಕ ದ್ವೈತಸಿದ್ಧಾಂತ ಪ್ರಮೇಯಗಳನ್ನು ಪ್ರತಿಪಾದಿಸಲಾಗಿದೆ. ಇಲ್ಲಿಯ ಸಂಯೋಜನಾ ಚಾತುರ್ಯ, ನಿರೂಪಣಾಕೌಶಲಗಳು ತಲೆದೂಗಿಸುವಂತಿವೆ. ಇಲ್ಲಿ ಬಳಕೆಗೊಂಡ ವೆಡ್ಡ, ಥಾಳಿಕಿ, ಲಗಳಿ, ಏಳಿಲ, ಲೇವಿದ, ಪೋಕ, ನಿಸ್ಸಾಳ, ಸುಪ್ಪಾಣಿ, ಮಲೇತು, ಉಗ್ಗಡಿಸು, ಹಚ್ಚಡಗಳಂತಹ ಅನೇಕ ಶಬ್ಧಗಳು ಕಾವ್ಯಸೌಂದರ್ಯವನ್ನು ಹೆಚ್ಚಿಸಿ ಆಕರ್ಷಕಗೊಳಿಸಿದಂತೆ ಬೆರಗುಗೊಳಿಸಿರುವುದೂ ಗಮನಾರ್ಹ. ನುಡಿಗಳು ಕೆಲವು ವೇಳೆ ಇನ್ನೂ ಹೆಚ್ಚು ನುಡಿಗಳಲ್ಲಿ ಒಂದೇ ವಿಷಯದ ಬಗ್ಗೆ ಕೃತಿರಚನೆ ಮಾಡುವಂತಹ ಕಲೆ ಪ್ರಸನ್ನವೆಂಕಟರಿಗೆ ಸಿದ್ಧಿಸಿದೆ. ಇವರ ಇತರ ಕೃತಿಗಳಂತೆ ಭೇದಮುಕ್ತಾವಲಿಯಲ್ಲಿಯೂ ಓತಪ್ರೋತ್ರವಾಗಿ ಹರಿಯುವ ಇವರ ವಾಗ್ಗಂಗೆಯ ಪ್ರವಾಹದಲ್ಲಿ ಮೀಯುವುದೇ ಒಂದು ದಿವ್ಯಾನುಭವ.

ಪ್ರಸನ್ನವೆಂಕಟರು, ಮಹಾರಾಷ್ಟ್ರದ ಭಕ್ತಿಪಂಥವು ಪಂಢರಪುರವನ್ನು ಆವರಿಸಿಕೊಂಡು ಸೊಲ್ಲಾಪುರ ವಿಜಾಪುರ ಪ್ರದೇಶಗಳಲ್ಲಿ ಪ್ರವೇಶಿಸುತ್ತಿದ್ದಾಗ ದಾಸಸಾಹಿತ್ಯದ ಮೂಲಕ ಪರಿಶುದ್ಧವಾದ ವೈಷ್ಣವ ಭಕ್ತಿಯ ದಿವ್ಯಸಂದೇಶವನ್ನು ಬಿತ್ತರಿಸಿ ಮಹಾರಾಷ್ಟ್ರ ಭಕ್ತಿ ಪಂಥದ ಆಕ್ರಮಣವನ್ನು ತಡೆಗಟ್ಟಿದರು. ಬಾಲಭಾಷೆಯಿಂದ ಸಾಹಿತ್ಯ ರಚನೆ ಪ್ರಸನ್ನವೆಂಕಟರದೊಂದು ವೈಶಿಷ್ಟ. ಪ್ರಸನ್ನವೆಂಕಟರ ಮೂಲಕ ದಾಸಸಾಹಿತ್ಯ ಸಾಂಸಾರಿಕ ವಿಷಯವನ್ನು ಪಾರಮಾರ್ಥಿಕಕ್ಕೆ ಹೊರಳಿಸಿಕೊಡುವ ತಂತ್ರ ವೈವಿಧ್ಯವನ್ನು ಇಲ್ಲಿ ಕಾಣುವಂತಾಯಿತು. ಮಗುವಿನ ಮುಗ್ಧ ಭಾಷೆ ಬಳಕೆಯಿಂದ ದಾಸಸಾಹಿತ್ಯ ಆಕರ್ಷಕಗೊಂಡು ಇನ್ನೂ ಹೆಚ್ಚು ಜನಪ್ರಿಯವಾಯಿತು.

ಹರಿದಾಸರ ಸಾಧನೆ ಧರ್ಮಸುಧಾರಕರಾದ ಯಾವ ಮಹಾಪುರುಷರ ಸಾಧನೆಗೂ ಕಡಿಮೆಯಿಲ್ಲದ್ದು ಎಂದರೆ ಅತಿಶಯೋಕ್ತಿಯೇನಲ್ಲ. ಇಹ ಪರ ಸಾಧನೆಗೈಯುವ ಮೂಲಕ ಆತ್ಮೋದ್ಧಾರದ ಜೊತೆಗೆ ಅವರು ಕಂಡ ಸಮಾಜೋದ್ಧಾರದ ಕನಸನ್ನು ನನಸಾಗಿಸಿಕೊಂಡವರು ಹರಿದಾಸರು. ಇಂಥವರಲ್ಲಿ ಪ್ರಸನ್ನವೆಂಕಟರೂ ಒಬ್ಬರೆಂದಾಗ ಅವರ ವ್ಯಕ್ತಿತ್ವ ಸ್ಪಷ್ಟವಾಗದಿರದು.

ದ್ವೈತಸಿದ್ಧಾಂತದ ವಿಚಾರಗಳನ್ನು ತಿಳಿಗನ್ನಡದಲ್ಲಿ ಸರಳಗೊಳಿಸುವುದರೊಂದಿಗೆ ಸಂಗೀತ ನೃತ್ಯಗಳ ಸಂಯೋಜನೆಯಿಂದ ಹಾಗೂ ವಿಷಯನಿರೂಪಣೆಯ ತಂತ್ರವೈವಿಧ್ಯದಿಂದ ಸುಲಭವಾಗಿಸಿದರು. ಇದರ ಜೊತೆಗೆ ಶಾಸ್ತ್ರಗ್ರಂಥಗಳು, ದೀರ್ಘ ಹಾಗೂ ಲಘುಕೃತಿಗಳು ಮತ್ತು ಜಾನಪದ ಮಟ್ಟುಗಳನ್ನೂ ಸಹ ಬಳಸಿಕೊಂಡರು. ಇವೆಲ್ಲವುಗಳ ಮೂಲಕ ದಾಸರು ನೀರಸ ಹಾಗೂ ಜಟಿಲವೆನಿಸಬಹುದಾಗಿದ್ದ ತತ್ವವಿಚಾರಗಳನ್ನು ಸಹ ವೈವಿಧ್ಯ ಪೂರ್ಣವಾಗಿಸಿ, ಆಕರ್ಷಕಗೊಳಿಸಿ ಸರಳವಾಗಿ, ಅಷ್ಟೇ ಸುಲಭವಾಗಿ ಜನಪರಗೊಳಿಸಿದರು. ದಾಸರ ಈ ಪರಿಶ್ರಮದಿಂದ ದ್ವೈತಸಿದ್ಧಾಂತ ವಿಚಾರಗಳು ಜನಪ್ರಿಯಗೊಳ್ಳಲು ಸಹಾಯವಾಯಿತು. ಜೊತೆಗೆ ಅದೇ ವೇಳೆಯಲ್ಲಿ ದಾಸಸಾಹಿತ್ಯದ ಮೂಲಕ ಸಂಗೀತ, ನೃತ್ಯ, ಸಾಹಿತ್ಯಕ್ಷೇತ್ರಕ್ಕೂ ಸಹ ದಾಸರಿಂದ ಮಹತ್ತರ ಕೊಡುಗೆ ಸಂದಿರುವುದು ಗಮನಾರ್ಹ.

ಸಂಸ್ಕೃತದ ಉಚ್ಚವಿದ್ವಾಂಸರು ಕನ್ನಡವನ್ನು ತುಚ್ಛವಾಗಿ ಕಾಣುತ್ತಿದ್ದ ದಿನಮಾನದಲ್ಲಿಯೇ ಕನ್ನಡದಲ್ಲಿ ಕೀರ್ತನೆ ರಚನೆಗೈದದ್ದು ಶ್ರೀ ಶ್ರೀಪಾದರಾಜರ ಒಂದು ದೊಡ್ಡ ಸಾಹಸ ಮಾತ್ರವಲ್ಲ ಕೀರ್ತನಕಾರರ ತಂಡವನ್ನೇ ಸಂಘಟಿಸಿ ಕೀರ್ತನ ಪರಂಪರೆಯನ್ನೇ ಹುಟ್ಟುಹಾಕಿದ ಅಪೂರ್ವ ಶ್ರೇಯಸ್ಸೂ ಶ್ರೀ ಶ್ರೀಪಾದರಾಜರದೆ. ಮುಂದೆ ವ್ಯಾಸರಾಜರ ನೇತೃತ್ವದಲ್ಲಿ ರೂಪುಗೊಂಡ ದಾಸಕೂಟ ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿತು. ಈ ದಾಸ ಸಾಹಿತ್ಯ ಆಂದೋಲನದಲ್ಲಿ ರಚನಾತ್ಮಕವಾಗಿ ಕ್ರಿಯಾಶೀಲರಾದ ಶ್ರೀ ಶ್ರೀಪಾದರಾಜರು, ಶ್ರೀ ವ್ಯಾಸರಾಜರು ಹಾಗೂ ಶ್ರಿ ವಾದಿರಾಜರಂತಹ ಮಠಾಧೀಪತಿಗಳೇ ಮುಂಚೂಣಿಯಲ್ಲಿದ್ದರು. ಜೊತೆಗೆ ಪುರಂದರದಾಸರು, ಕನಕದಾಸರಂಥವರು ತಮ್ಮ ಸಮಸ್ತ ಬದುಕನ್ನೇ ದಾಸಸಾಹಿತ್ಯ ಸೇವೆಗೆ ಸಮರ್ಪಿಸಿ ಸವೆಸಿದರು. ಸಮಾಜದಲ್ಲಿ ಪ್ರಮುಖರೆನಿಸಿದ ಮಠಾಧಿಪತಿಗಳಂಥವರ ನೇತೃತ್ವ ಹಾಗೂ ಪುರಂದರದಾಸರು ಕನಕದಾಸರು ಮಹಿಪತಿದಾಸರು, ವಿಜಯದಾಸರು, ಪ್ರಸನ್ನವೆಂಕಟದಾಸರು, ಗೋಪಾಲದಾಸರು, ಜಗನ್ನಾಥದಾಸರಂಥವರ ಸಮರ್ಪಣಾಭಾವದ ಸತತ ತುಡಿತಗಳ ಪರಿಣಾಮವಾಗಿ ದಾಸಸಾಹಿತ್ಯ, ವೈವಿಧ್ಯ ಹಾಗೂ ವೈಶಿಷ್ಟಪೂರ್ಣವಾಯಿತಲ್ಲದೆ ಬಹು ಬೇಗ ಜನಪ್ರಿಯವೂ ಆಯಿತು.

ಈ ರೀತಿ ಹರಿದಾಸರು ಹರಿಯ ಸರ್ವೋತ್ತಮ ತಾನು ಅವನದಾಸ ಎಂಬ ನಿತ್ಯ ಅತ್ಯ ತತ್ವವನ್ನು (ಕೆಲವರು) ವೈಯಕ್ತಿಕ ನೆಲೆಯಲ್ಲಿಯೂ ಅನುಭವಿಸಿದರು. ಹರಿದಾಸ ದೀಕ್ಷಾ ಬದ್ಧರಾಗಿ, ಪ್ರಪಂಚ ವಿರಕ್ತಿಯೊಂದಿಗೆ ಹರಿಭಕ್ತಿಯನ್ನು ಸಾಧಿಸಿ, ನುಡಿಗಿಂತ ಹೆಚ್ಚು ನಡೆಯಿಂದಲೇ ಲೋಕನೀತಿಯನ್ನು ಬೋಧಿಸಿ ಸಮಾಜವನ್ನು ಜಾಗ್ರತಗೊಳಿಸಿದರು. ಹೀಗೆ ವ್ಯಷ್ಟಿ, ಸಮಷ್ಟಿಗಳ ಅಭ್ಯುದಯ ಸಾಧನೆಯ ಮೂಲಕ ಒಟ್ಟು ಸಮಾಜೋನ್ನತಿಗೆ ಶ್ರಮಿಸಿದ ಹರಿದಾಸರ ವೈಶಿಷ್ಟ್ಯ ಪೂರ್ಣವಾದ ಈ ಸಾಧನೆ ಆಧ್ಯಾತ್ಮಿಕ ಸಾಧಕರಿಗೊಂದು ದಿವ್ಯ ಪ್ರೇರಣೆ.

❑❑